ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಏಪ್ರಿಲ್ -೨೦೧೭ ಸಂಚಿಕೆ - ೯

ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಪಂಚಾಯತ್‌ರಾಜ್

*

ತಪ್ಪು ಒಪ್ಪೋಣ, ಅಪ್ಪೋಣ ಬೇಡ

*

ಮಾತೃಭಾಷೆ, ಭಾವವೇಶ ಮತ್ತು ಜಾಗತೀಕರಣ

ಜನಪದ ವಿಚಾರದಲ್ಲಿ

ಏಪ್ರಿಲ್ - ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್ - ೨೦೧೬
ಸಂಪುಟ - ೧೭
ಸಂಚಿಕೆ - ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಹಾಡು ಹಕ್ಕಿ

ಹಾಡು ಹಕ್ಕಿ ಹಾಡು ನೀ
ಮನಕೆ ಮುದವ ನೀಡು ನೀ

ಸುತ್ತ ಕಣ್ಣ ತೆರೆದು ನೋಡು
ಬೇವು ಬೆಲ್ಲ ಬೆರೆಸಿ ಹಾಡು
ಹೊತ್ತ ಭಾರ ದೂರ ಮಾಡು
ಜೀವಕಿನಿತು ಸೊಗವ ನೀಡು

ನೋವು ಕಾವು ಕರಗುವಂತೆ
ಎದೆಯು ಹಗುರವಾಗುವಂತೆ
ಮನದಿ ಶಾಂತಿ ನೆಲೆಸುವಂತೆ
ಸುಖದ ಗಾಳಿ ಬೀಸುವಂತೆ
ಹೆಸರ ಗಳಿಸೆ ಬಳಲ ಬೇಡ
ಬಿಸಿಲು ಕುದುರೆ ಏರ ಬೇಡ
ಮಧುಮಾಸಕೆ ಕಾಯಬೇಡ
ಶಿಶಿರವನ್ನು ದೂರಬೇಡ

ನಿಂದೆ ನುಡಿಗೆ ನೋಯದಂತೆ
ಬಂದ ಎಡರಿಗಂಜದಂತೆ
ಕದ್ದು ಹಾಡ ಹಾಡದಂತೆ
ಎದೆಯ ಹಾಡ ಮರೆಯದಂತೆ

ಹಾಡು ಹಕ್ಕಿ ಹಾಡು ನೀ
ಮನಕೆ ಮುದವ ನೀಡು ನೀ

- ಶಾರದಾ ಜಡೆ

ಚಿಂತನೆಗೊಂದು ಸಂಗತಿ

ಐರೋಮ್ ಶರ್ಮಿಳಾ

ಇತ್ತೀಚೆಗೆ ಪಂಚ ರಾಜ್ಯಗಳಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಅದ್ವಿತೀಯ ಗೆಲುವನ್ನು ಸಾಧಿಸಿತು. ಮಾಧ್ಯಮಗಳೆಲ್ಲವೂ ನರೇಂದ್ರಮೋದಿಯವರ ನಾಯಕತ್ವವೇ ಈ ಅಭೂತಪೂರ್ವ ಜಯಕ್ಕೆ ಕಾರಣವೆಂದು ಹೊಗಳಿದವು, ಎಲ್ಲ ಕಡೆ ವಿಜಯೋತ್ಸವ ನಡೆಯಿತು. ವಿಷಾದನೀಯ ಸಂಗತಿಯೇನೆಂದರೆ ಚುನಾವಣೆಯ ಈ ವಿಶ್ಲೇಷಣೆಗಳಲ್ಲಿ ವಿಚಾರವಾದಿ ಮತ್ತು ಪ್ರತಿಭಟನಾಕಾರಿ ಐರೋಮ್ ಶರ್ಮಿಳಾನ ಸೋಲಿನ ಬಗ್ಗೆ ಯಾವ ಪತ್ರಿಕೆಯ ಸಂಪಾದಕೀಯವೂ ವಿಶಾದ ವ್ಯಕ್ತಪಡಿಸಿಲ್ಲ! ಎಲ್ಲರಿಗೂ ಗೊತ್ತಿರುವಂತೆ ಹದಿನಾರು ವರ್ಷಗಳ ಕಾಲ ಉಪವಾಸದ ಮೂಲಕ ಸಸ್ತ್ರಸ್ತ ಪಡೆಯ ವಿಶೇಷ ಅಧಿಕಾರದ ಕಾನೂನಿನ ವಿರುದ್ಧ ಹೋರಾಡಿದ ಮಹಿಳೆ, ಇನ್ನೂ ಕೂಡ ಆ ಕಾನೂನು ಭಾಗಶಃ ಅಸ್ತಿತ್ವದಲ್ಲಿವೆ. ಸ್ವತಂತ್ರ ಭಾರತದಲ್ಲಿನ ಶಸ್ತ್ರಪಡೆಗೆ ವಿಶೇಷ ಅಧಿಕಾರವನ್ನು ಕೊಡುವುದು ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಗೆ ವಿರೋಧವಾಗಿದೆ. ಶರ್ಮಿಳಾ ತಮ್ಮ ೧೬ನೇ ವಯಸ್ಸಿನಲ್ಲಿ ಈ ರಾಕ್ಷಸಿ ಕಾನೂನು ವಿರುದ್ಧ ಹೋರಾಟ ಶುರು ಮಾಡಿದರು. ಕೆಲವಾರು ಬಾರಿ ಬಂಧನಕ್ಕೂ ಒಳಗಾಗಿದ್ದರು. ಅವರು ಆ ಕಾನೂನು ವಿರುದ್ಧ ಹೋರಾಡುತ್ತಿದ್ದಾಗ ದೇಶದ ಪತ್ರಿಕೆಗಳು ಐರೋಮ್ ಶರ್ಮಿಳಾನ ದಿಟ್ಟ ಹೋರಾಟವನ್ನು ಹೊಗಳಿ ಬರೆಯುತ್ತಿದ್ದವು. ಅನೇಕ ಬುದ್ಧಿಜೀವಿಗಳು ಅವರಿಗೆ ನೈತಿಕ ಬೆಂಬಲ ವ್ಯಕ್ತಪಡಿಸುತ್ತಿದ್ದರು. ಆದರೆ ಚುನಾವಣೆಯಲ್ಲಿ ಅವರು ಕೇವಲ ೯೦ ಮತಗಳನ್ನು ಮಾತ್ರ ಪಡೆಯಲು ಸಾಧ್ಯವಾಹುವುದಕ್ಕೆ ಯಾವುದೇ ಪ್ರಕಾರದ ಪ್ರತಿಕ್ರಿಯೆಯನ್ನು ಪತಿಕೆಗಳು ವ್ಯಕ್ತಪಡಿಸಿಲ್ಲ. ಯಾವ ಮಣಿಪುರ ರಾಜ್ಯದಲ್ಲಿ ವಿಶೇಷವಾಗಿ ಆ ರಾಕ್ಷಸಿ ಕಾನೂನು ಜಾರಿಯಾಗುತ್ತಿತ್ತೊ ಆ ರಾಜ್ಯದ ಮತದಾರರು ಶರ್ಮಿಳಾರವರ ಹದಿನಾರು ವರ್ಷಗಳ ಸೈದ್ಧಾಂತಿಕ ಹೋರಾಟವನ್ನು ಪರಿಗಣಿಸದೆ ಇದ್ದುದು ನೋವನ್ನುಂಟುಮಾಡುತ್ತದೆ. ಈ ಬಗ್ಗೆ ದೇಶದ ವಿಚಾರವಾದಿಗಳು ಮತ್ತು ಪ್ರಜಾಪ್ರಭುತ್ವ ಪ್ರೇಮಿಗಳು ಚಿಂತನೆ ಮಾಡುವುದು ಅಗತ್ಯ. ಶರ್ಮಿಳಾರವರ ಹೋರಾಟ ಹಿಂಸೆಯ ವಿರುದ್ಧ ಇತ್ತು. ಎಲ್ಲ ಪ್ರಮುಖ ಪತ್ರಿಕೆಗಳ ಸಂಪಾದಕೀಯಗಳಲ್ಲಿ ಚುನಾವಣೆಯ ಫಲಿತಾಂಶದ ವಿಶ್ಲೇಷಣೆ ನಡೆಯಿತು. ಆ ಸಂಪಾದಕೀಯಗಳಲ್ಲಿ ಬಿ.ಜೆ.ಪಿ.ಯ ಸಾಧನೆಯ ಗುಟ್ಟಿನ ಬಗ್ಗೆ ಬರೆಯಲಾದವು. ಪಂಜಾಬಿನಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿನ ಬಗ್ಗೆ ಬರೆಯಲಾಗಿದೆ. ಗೋವಾ ಮತ್ತು ಮಣಿಪುರ್‌ನಲ್ಲಿ ಬಿ.ಜೆ.ಪಿ. ಬಹುಮತ ಪಡೆದಿದ್ದರೂ, ಅಲ್ಲಿ ಬಿ.ಜೆ.ಪಿ. ಸರ್ಕಾರ ರಚಿಸುವ ಸಾಧ್ಯತೆಯ ಬಗ್ಗೆ ಬರಿಯಲಾಗಿದೆ. ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಲ್ಲಿ ಅನೇಕರು ಕೋಟ್ಯಾಧೀಶ್ವರರು ಇದ್ದಾರೆ. ಇನ್ನು ಅನೇಕರು ಅಪರಾಧದ ಹಿನ್ನಲೆಯುಳ್ಳವರಾಗಿದ್ದಾರೆ. ಚುನಾವಣೆ ಫಲಿತಾಂಶದ ಬಗ್ಗೆ ವರ್ಣಮಯ ಸುದ್ಧಿಗಳು ಪ್ರಕಟವಾಗಿವೆ.

ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಪಂಚಾಯತ್‌ರಾಜ್

– ಸುರೇಂದ್ರ ಕೌಲಗಿ

ಸಂವಿಧಾನದ ಆಶಯದ ಪ್ರಕಾರ ದೇಶದ ತುಂಬೆಲ್ಲ ಪಂಚಾಯತ್‌ರಾಜ್ ಸಂಸ್ಥೆಗಳ ಸ್ಥಾಪನೆ ಆಗಿದೆ. ಮಹಾತ್ಮಗಾಂಧೀಜಿಯವರ ಮೂಲ ಆಶಯವಾಗಿದ್ದ ಸ್ವರಾಜ್ಯದ ಕಲ್ಪನೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ರೂಪುಗೊಂಡಿದೆ. ಆ ವ್ಯವಸ್ಥೆಯು ಮೂರು ಹಂತಗಳಲ್ಲಿ ಇದೆ. ೧. ಜಿಲ್ಲಾಪಂಚಾಯತ್; ೨.ತಾಲ್ಲೂಕ್‌ಪಂಚಾಯತ್; ೩. ಗ್ರಾಮಪಂಚಾಯತ್; ಈ ಮೂರು ಸಂಸ್ಥೆಗಳ ಮೂಲಕ ನಮ್ಮ ದೇಶದ ಎಲ್ಲ ನಾಗರಿಕರು ಪಂಚಾಯತ್‌ರಾಜ್ ವ್ಯವಸ್ಥೆಗೆ ಒಳಗಾಗಿದ್ದಾರೆ. ಕರ್ನಾಟಕ ರಾಜ್ಯ ಒಂದರಲ್ಲಿಯೇ ಆರು ಸಾವಿರದ ಇಪ್ಪತ್ತೇರಡು ಗ್ರಾಮಪಂಚಾಯಿತಿಗಳಿವೆ. ಈ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ೮೫,೦೪೫ ಚುನಾಯಿತ ಪ್ರತಿನಿಧಿಗಳಿದ್ದಾರೆ. ದೇಶದ ಜನರು ಪಂಚಾಯತ್ ರಾಜ್ಯದಲ್ಲಿ ಎರಡು ರೀತಿಯಲ್ಲಿ ಭಾಗಿಯಾಗಿದ್ದಾರೆ. ಮೊದಲನೇಯದು ಮತದಾರರಾಗಿ ಮತ್ತು ಎರಡನೇಯದು ಫಲಾನುಭವಿಗಳಾಗಿ. ಇಷ್ಟೊಂದು ದೊಡ್ಡ ಗ್ರಾಮೀಣ ಅಭಿವೃದ್ಧಿ ವ್ಯವಸ್ಥೆ ರೂಪುಗೊಂಡಿರುವಾಗ ಸಹಜವಾಗಿಯೇ ಪ್ರತಿಯೊಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಪಂಚಾಯತ್ ರಾಜ್ ವ್ಯವಸ್ಥೆಯ ಮೇಲೆ ತನ್ನ ನಿಯಂತ್ರಣ ಇಟ್ಟುಕೊಳ್ಳಲು ಬಯಸುತ್ತದೆ. ಆ ನಿಯಂತ್ರಣ ರಾಜಕೀಯ ರೂಪದಲ್ಲಿ ಮತ್ತು ಆರ್ಥಿಕ ಅನುದಾನದ ರೂಪದಲ್ಲಿ ಇರುತ್ತದೆ. ಈ ನಿಯಂತ್ರಣ ಬಲು ಬಲವಾಗಿರುವಂಥವು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಜನ ಚುನಾಯಿತ ಪ್ರತಿನಿಧಿಗಳು ಬರುವುರಾದರೂ, ಅವರು ಸ್ವತಂತ್ರವಾಗಿ ಯೋಚನೆ ಮಾಡುವ ಅಥವಾ ಕಾರ್ಯವೆಸಗುವ ಸ್ಥಿತಿಯಲ್ಲಿರುವುದಿಲ್ಲ! ಪಂಚಾಯತ್‌ರಾಜ್ ಸಂಸ್ಥೆಗಳು ಸ್ವತಂತ್ರ ವಿಕೇಂದ್ರಿತ ಘಟಕಗಳೆಂದು ತಾತ್ವಿಕವಾಗಿ ಹೇಳಲ್ಪಡುತ್ತಿದ್ದರೂ, ಅವು ಪರೋಕ್ಷವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಜ್ಞೆ ಪಾಲಿಸುವ, ಅವು ಹೇಳಿದಂತೆ ನಡೆಯುವ ಏಜೆಂಟ್‌ಗಳೇ ಆಗಿರುತ್ತವೆ! ಇಂದಿನ ಪರ್ವ ಅಭಿವೃದ್ಧಿ ಪರ್ವವಾಗಿರುವುದರಿಂದ ಯಾವುದೇ ಪ್ರಕಾರದ ಅಭಿವೃದ್ಧಿಯಾಗಿರಲಿ, ಅದನ್ನು ಸಾಧಿಸಲು ಹೇರಳವಾಗಿ ಹಣಬೇಕಾಗುತ್ತದೆ. ಆಗ ವಿತರಣೆ ಮತ್ತು ಖರ್ಚಾಗುವ ಹಣದ ಮೇಲೆ ನಿಯಂತ್ರಣ ಬಂದೇ ಬರುತ್ತದೆ. ಇಡೀ ಪಂಚಾಯತ್‌ರಾಜ್ ವ್ಯವಸ್ಥೆಯ ಮೇಲೆ ಪಂಚಾಯತ್ ಇಲಾಖೆಯ ನಿಯಂತ್ರಣ; ತಾಲ್ಲೂಕ ಪಂಚಾಯತ್‌ರಾಜ್ಯದ ಮೇಲೆ ಜಿಲ್ಲಾ ಪಂಚಾಯತ್ ನಿಯಂತ್ರಣ; ಗ್ರಾಮ ಪಂಚಾಯತಿಗಳ ಮೇಲೆ ತಾಲ್ಲೂಕ

ಪಂಚಾಯತ್ ನಿಯಂತ್ರಣ; ಈ ರೀತಿ ಮೇಲಿನಿಂದ ಕೆಳಗಿನ ಹಂತದವರೆಗೆ ನಿಯಂತ್ರಣ ಇರುತ್ತದೆ. ಇಂಥ ನಿಯಂತ್ರಣದ ಸ್ಥಿತಿಯಲ್ಲಿ ತಮ್ಮನ್ನು ಸರ್ವತಂತ್ರ ಸ್ವತಂತ್ರ ಎಂದು ಭಾವಿಸಿರುವ ಜನತಾ ಪ್ರತಿನಿಧಿಗಳು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಉಸುರಿಗಟ್ಟುವ ವಾತಾವರಣದಲ್ಲಿ ಕೆಲಸ ಮಾಡಬೇಕಾಗುತ್ತದೆ. ಏಕಕಾಲದಲ್ಲಿ ಅವರು ಸರ್ವತಂತ್ರ ಸ್ವತಂತ್ರ ವ್ಯಕ್ತಿಗಳಾಗಿಯೂ, ಇನ್ನೊಂದು ಸಲ ಪರೋಕ್ಷವಾಗಿ ಸರ್ಕಾರಿ ನೌಕರರಂತೆಯೂ ಕೆಲಸ ಮಾಡಬೇಕಾಗುತ್ತದೆ! ಆಗ ಪಂಚಾಯತ್ ರಾಜ್ಯದ ನಿಜವಾದ ಧ್ಯೇಯೋದ್ದೇಶಗಳು ನೆರವೇರುವುದಿಲ್ಲ. ಬದಲಿಗೆ ಪಂಚಾಯತ್ ರಾಜ್ ಸಂಸ್ಥೆಗಳು ರಾಜಕೀಯ ಮೇಲಾಟದ ಮತ್ತು ಭ್ರಷ್ಟಚಾರದ ಸ್ಥಳಗಳಾಗಿ ಪರಿವರ್ತಿತಗೊಳ್ಳುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆ ದೇಶದಲ್ಲಿ ಪ್ರಾರಂಭವಾಗಿ ಆರು ದಶಕಗಳೇ ಆದವು. ಆದರೆ ಈ ಅವಧಿಯಲ್ಲಿ ಪಂಚಾಯತ್‌ರಾಜ್ಯದ ಗುರಿಯಾದ ಗ್ರಾಮೀಣಾಭಿವೃದ್ಧಿಗೆ ಸ್ಪಷ್ಟ ರೂಪರೇಶೆಗಳೇ ದೊರೆತಿಲ್ಲ. ದೇಶದ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳು ಮತ್ತು ಅವುಗಳನ್ನು ತಯಾರಿಸಿ ಜಾರಿಗೆ ತರುವ ನೀತಿ ಆಯೋಗದಂಥ ವ್ಯವಸ್ಥೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಪ್ರತ್ಯೇಕವಾಗಿ ಇಲ್ಲ. ನಿರ್ದಿಷ್ಟ ಯೋಜನೆಯ ಬೆಳವಣಿಗೆಯ ರೀತಿ ಸ್ಪಷ್ಟವಾಗಿಲ್ಲದಿರುವುದರಿಂದ ಪ್ರತಿಯೊಂದು ಗ್ರಾಮ, ತಾಲ್ಲೂಕಿನ ಪಟ್ಟಣ ಮತ್ತು ಜಿಲ್ಲಾ ಪಟ್ಟಣಗಳು ತಮ್ಮ ಮನಸೋ ಇಚ್ಛೆಯಂತೆ ಬೆಳೆಯುತ್ತಿವೆ. ಈ ಬೆಳವಣಿಗೆಯಲ್ಲಿ ಅವು ತಮ್ಮ ಗ್ರಾಮೀಣ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿವೆ. ಅದರ ಸ್ಥಳದಲ್ಲಿ ಹೊಸ ವ್ಯವಸ್ಥೆಯನ್ನು ತರಲು ಕಷ್ಟಪಡುತ್ತಿವೆ. ಆದ್ದರಿಂದ ಪ್ರತಿಯೊಂದು ಗ್ರಾಮ, ಪಟ್ಟಣ, ನಗರ, ನೀರು, ಆರೋಗ್ಯ, ವಿದ್ಯುತ್‌ದ್ವೀಪ, ರಸ್ತೆ, ಬಡಾವಣೆ ಮುಂತಾದ ಮೂಲ ಸೌಕರ್ಯಗಳ ಅಭಾವದಲ್ಲಿ ಅವೆಲ್ಲವೂ ಕೊಂಪೆಗೊಳಗಾಗುತ್ತಿವೆ. ಜನಪ್ರತಿನಿಧಿಗಳ ಉತ್ಸಾಹದ ಪಾಲುಗಾರಿಕೆಯಿಂದ ಗ್ರಾಮುಗಳು ಮತ್ತು ಪಟ್ಟಣಗಳು ನಂದನವನವಾಗುತ್ತಿಲ್ಲವಾದುದರಿಂದ ಮತ್ತು ಅವುಗಳ ಸ್ಥಿತಿ ಯಥಾ ಪ್ರಕಾರವೇ ಮುಂದುವರೆಯುತ್ತಿರುವುದರಿಂದ ಈಗ ಕೇಂದ್ರ ಸರ್ಕಾರವು ಸ್ಮಾರ್ಟ್‌ಸಿಟಿ, ಸ್ಮಾರ್ಟ್‌ವಿಲೇಜ್ ಎಂಬ ನೂತನ ಯೋಜನೆಗಳನ್ನು ಪ್ರಾರಂಭಿಸಿ ಕೋಟ್ಯಾವಧಿ ಹಣವನ್ನು ಖರ್ಚುಮಾಡಲು ಹೊರಟಿದೆ.

ಅಂತೂ ಅಭಿವೃದ್ಧಿಯ ಹೆಸರಿನಲ್ಲಿ ಹಣದ ಹೊಳೆ ಹರಿಯುತ್ತಿದೆ. ಮಹಾತ್ಮ ಗಾಂಧಿ ಉದ್ಯೋಗಖಾತ್ರಿ ಯೋಜನೆ ಖಾಸಗಿ ವ್ಯಕ್ತಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಮತ್ತು ಪಂಚಾಯತ್ ಸಿಬ್ಬಂದಿಯವರು ವಾಮಮಾರ್ಗದಿಂದ ಹಣ ಸಂಪಾದಿಸುವುದಕ್ಕೆ ಅವಕಾಶವಾಗಿದೆ. ಆದ್ದರಿಂದಲೇ ಪಂಚಾಯತ್ ರಾಜ್ಯದ ಅಧಿಕಾರಿಗಳು ಕೋಟ್ಯಾಧೀಶ್ವರರಾಗಿರುವುದು. ಅಂಥವರ ಮನೆಯಮೇಲೆ ಲೋಕಾಯುಕ್ತರು ದಾಳಿ ಮಾಡಿ ಅಕ್ರಮ ಸಂಪತ್ತನ್ನು ವಶಪಡಿಸಿಕೊಂಡ ಉದಾಹರಣೆಗಳು ಬೇಕಾದಷ್ಟಿವೆ. ಈ ರೀತಿಯಾಗಿ ಪಂಚಾಯತ್ ರಾಜ್ ವ್ಯವಸ್ಥೆ

ದೇಶಕ್ಕೆ ವರವಾಗುವುದರ ಬದಲು ಶಾಪವಾಗುತ್ತಿದ್ದಿಯೇ ಹೇಗೆ ಎಂದೆನಿಸುತ್ತದೆ. ಯಾರಲ್ಲಿಯೂ ತಮ್ಮ ಗ್ರಾಮ ತಮ್ಮ ದೇಶ ಎಂಬ ಭಾವನೆಯಿಲ್ಲವಾಗಿದೆ. ಸಾಮೂಹಿಕ ಜನಶಕ್ತಿ ಬದಲು ಧನಶಕ್ತಿ ಮತ್ತು ಯಂತ್ರ ಶಕ್ತಿಗಳ ಉಪಯೋಗದಿಂದ ಮಾತ್ರ ಅಭಿವೃದ್ಧಿ ಸಾಧ್ಯವೆಂಬ ಮೌಲ್ಯ ನೆಲೆಯೂರಿದೆ. ಸ್ವಪ್ರಯತ್ನದ ಸ್ಥಳವನ್ನು ಸರ್ಕಾರದ ಪ್ರಯತ್ನ ಆವರಿಸಿಕೊಂಡಿದೆ. ಆದ್ದರಿಂದ ಸರ್ಕಾರದಲ್ಲಿ ಸಿಬ್ಬಂದಿ ಸಂಖ್ಯೆ ಹೆಚ್ಚಾಗುತ್ತಿದೆ; ಇಲಾಖೆಗಳು ಹೆಚ್ಚಾಗುತ್ತಿವೆ. ೧೯೯೬ರಲ್ಲಿ ರಾಜ್ಯ ಸರ್ಕಾರದಲ್ಲಿ ೬೪ ಲಕ್ಷ ನೌಕರರಿದ್ದರು. ಇವರಿಗೆ ಸಂಬಳವಾಗಿ ಪ್ರತಿವರ್ಷ ೪,೪೫೦ ಕೋಟಿ ರೂಪಾಯಿ ಖರ್ಚಾಗುತ್ತಿದೆ. ಕೇಂದ್ರ ಸರ್ಕಾರದ ನೌಕರರ ಸಮಾನಕ್ಕೆ ಇವರ ವೇತನವನ್ನು ಹೆಚ್ಚಿಸುವುದಾದರೆ ಇನ್ನೂ ಆರು ಸಾವಿರ ಕೋಟಿ ಬೇಕು. ಪಂಚಾಯತ್ ರಾಜ್ ವ್ಯವಸ್ಥೆ "ಮೂಗಿಗಿಂತ ಮೂಗುತಿ ಬಾರ" ಎಂಬ ಗಾದೆಯ ಮಾತಿನಂತೆ ಆಗಿದೆಂದೆನಿಸುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆಗೆ ತನ್ನದೇ ಆದಂತಹ ಸಂಪನ್ಮೂಲಗಳು ಇಲ್ಲದೆ ಇರುವಾಗ ಅವು ಎಲ್ಲದಕ್ಕೂ ಸರ್ಕಾರದ ಅನುದಾನವನ್ನೇ ಅವಲಂಬಿಸಬೇಕಾಗುತ್ತದೆ. ಗ್ರಾಮಗಳ ಮೂಲ ಆದಾಯದ ಕ್ಷೇತ್ರವಾದ ಕೃಷಿ ಕ್ಷೀಣಿಸುತ್ತಿದೆ; ಗ್ರಾಮೋದ್ಯೋಗಗಳಂತೂ ಇಲ್ಲವೇ ಇಲ್ಲ. ಗ್ರಾಮದಲ್ಲಿರುವ ಶಿಕ್ಷಣ ಸಂಸ್ಥೆಗಳು ಮತ್ತು ಇನ್ನಿತರ ಸೇವಾ ಸಂಸ್ಥೆಗಳೊಂದಿಗೆ ಪಂಚಾಯಿತಿಗಳ ಸಮನ್ವಯವೇ ಇಲ್ಲ. ಈ ಎಲ್ಲ ಕಾರಣದಿಂದ ಪಂಚಾಯತ್ ರಾಜ್ ವ್ಯವಸ್ಥೆ ಉತ್ಸಾಹವಿಲ್ಲದ, ಸಂತೋಷವಿಲ್ಲದ ಮತ್ತು ಶಾಂತಿ ಇಲ್ಲದ ಒಣ ಭೂ ಪ್ರದೇಶದಂತಾಗಿದೆ.

ಈಗಿನ ಕೇಂದ್ರ ಸರ್ಕಾರದ ನೇತಾರರು ಹಗಲು ಇರುಳು ಅಭಿವೃದ್ಧಿ ಮಂತ್ರವನ್ನೇ ಜಪಿಸುತ್ತಿದ್ದಾರೆ. ಸ್ವಾತಂತ್ರ್ಯ ಆಂದೋಲನದ ಮಾದರಿಯಲ್ಲಿ ಅಭಿವೃದ್ಧಿಗಾಗಿ ಎರಡನೇಯ ಆಂದೋಲನ ನಡೆಯಬೇಕೆಂದು ಪ್ರಧಾನಮಂತ್ರಿ ಬಯಸುತ್ತಾರೆ. ದೇಶವನ್ನು ಆರ್ಥಿಕವಾಗಿ ಮತ್ತು ರಕ್ಷಣಾ ವ್ಯವಸ್ಥೆಯ ಸಬಲೀಕರಣಕ್ಕಾಗಿ ಮತ್ತು ನೆರೆ ದೇಶಗಳ ಆಕ್ರಮಣ ಶೀಲತೆಯನ್ನು ತಡೆಯುವುದಕ್ಕಾಗಿ, ಜಗತ್ತಿನ ವಿವಿಧ ದೇಶಗಳನ್ನು ಆಹ್ವಾನಿಸಿ ಭಾರತದಲ್ಲಿ ಉದ್ಯೋಗ ಪ್ರಾರಂಭಿಸಲು ಸರ್ಕಾರ ಪ್ರೋತ್ಸಾಹಿಸುತ್ತಿದೆ. ಆದ್ದರಿಂದ ದೇಶದ ಸ್ವದೇಶಿ ವಿಚಾರ ಮಾಯಾವಾಗಿದೆ. ಪರದೇಶಿ ವ್ಯಾಮೋಹ ಹೆಚ್ಚಾಗಿದೆ. ಇಂಥ ರಾಜಕೀಯ ಮತ್ತು ಆರ್ಥಿಕ ಮತ್ತು ಸಾಂಸ್ಕೃತಿಕ ತಲ್ಲಣಗಳ ಸುಳಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ತಮಗೆ ಅರಿವಿಲ್ಲದೆಯೇ ಸಿಕ್ಕಿಕೊಂಡಿವೆ. ಸ್ವರಾಜ್ಯ ಮೂಲಕ ಪಂಚಾಯತ್‌ರಾಜ್ ಮತ್ತು ಪಂಚಾಯತ್‌ರಾಜ್ ಮೂಲಕ ಗ್ರಾಮಸ್ವರಾಜ್ಯದ, ಗ್ರಾಮ ಸ್ವರಾಜ್ಯ ಮೂಲಕ ಸ್ವರಾಜ್ಯ ಗಾಂಧೀಜಿಯವರ ಕಲ್ಪನೆ ಮಣ್ಣುಗೂಡುತ್ತಿದೆ. ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಪಂಚಾಯತ್ ರಾಜ್ಯಕ್ಕೆ ನಿಜವಾದ ಭವಿಷ್ಯವಿದೆಯೇ ಎಂಬ ಪ್ರಶ್ನೆ ನವಭಾರತದ ಕನಸನ್ನು ಕಾಣಬಯಸುವ ಭಾರತೀಯರನ್ನು ಕಾಡುತ್ತದೆ.

ಭಾರತ–ಪಾಕ್ ಸಂಬಂಧ ಮತ್ತು ಕಾಶ್ಮೀರ ಸಮಸ್ಯೆ

–ಬಿ. ವಿವೇಕಾನಂದನ್
ಅನು ಸುರೇಂದ್ರ ಬಿ.ವಿ

(ಈಗಿನ ವಿದೇಶಾಂಗ ಕಾರ್ಯದರ್ಶಿಯವರಾದ ಶ್ರೀ ಜಯಶಂಕರ್ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಸ್ಥಿರವಾದ ಮೈತ್ರಿಗಾಗಿ ಪ್ರಯತ್ನಿಸುತ್ತಿದ್ದಾರೆ. ಅವರ ಪ್ರಯತ್ನ ಕುರಿತಾದ ವಿಷಯಗಳು ಈ ಲೇಖನದಲ್ಲಿ ಪ್ರಸ್ತಾಪಿತವಾಗಿದೆ. ಅವರಿಗೆ ಯಶಸ್ಸನ್ನು ಕೋರುವ – ಸಂ)

ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿನ ನೀತಿ ನಿರೂಪಕರು ಭಾರತ–ಪಾಕಿಸ್ತಾನದ ಪ್ರಸಕ್ತ ಸಂಬಂಧಗಳು ಮತ್ತು ಆ ಸಂಬಂಧಗಳ ಭವಿಷ್ಯದ ಗತಿ ದೀರ್ಘಾವಧಿಯಲ್ಲಿ ಹೇಗಿರಬೇಕೆಂದು ಒಂದು ಕಠಿಣ ಮೌಲ್ಯಮಾಪನ ಮಾಡಿದರೆ ಆಗ ಉಭಯ ದೇಶದಲ್ಲಿನ ಇಂದಿನ ವಿದ್ವೇಷದ ಮತ್ತು ವೈರತ್ವದ ಭಾವನೆಗಳು ಪರಸ್ಪರ ವಿನಾಶಕಾರಿಯಾಗಿಯೂ ಹಾಗು ತೀರಾ ಅಸ್ಥಿರವಾದದ್ದೂ ಎಂದು ಸುಲಭವಾಗಿ ತಿಳಿಯುತ್ತದೆ. ಇದೇ ರೀತಿ ಇನ್ನೊಂದು ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನದ ವಿಧಿಯು ಪರಸ್ಪರ ಎಷ್ಟು ಬೆಸೆದುಕೊಂಡಿದೆ, ಭಾರತಕ್ಕೆ ಪಾಕಿಸ್ತಾನವೂ, ಪಾಕಿಸ್ತಾನಕ್ಕೆ ಭಾರತವೂ ಎಷ್ಟು ಮುಖ್ಯ, ತಮ್ಮ ಶ್ರೇಯೋಭಿವೃದ್ಧಿಗಾಗಿ ಪರಸ್ಪರರ ಸಹಕಾರ ಎಷ್ಟು ಮುಖ್ಯ ಎಂದೂ ತಿಳಿದು ಬರುವುದು. ಹಾಗೆ ನೋಡಿದರೆ ಉಭಯ ದೇಶಗಳು ಪರಸ್ಪರ ಶತ್ರುಗಳು ಅಥವಾ ಸಂಭಾವ್ಯ ಶತ್ರುಗಳು ಎಂದು ಬಿಂಬಿಸುವುದೇ ದೊಡ್ಡ ತಪ್ಪಾಗುತ್ತದೆ. ಈ ದೇಶಗಳ ಜನರ ನಡುವಿನ ಸ್ವಾಭಾವಿಕ ಸ್ನೇಹ ಸಂಬಂಧಗಳು ಬೇರೆಯದೇ ಕಥೆ ಹೇಳುತ್ತದೆ. ಈ ಎರಡು ಜನರ ಹೃದಯದಲ್ಲಿ ಒಂದು ರೀತಿಯ ಸಹಜ ಸೆಳೆತ ನೆಲೆಸಿರುವುದನ್ನು ನಾವು ಗಮನಿಸದೆ ಇರಲಾಗದು. ಈ ರೀತಿಯ ಸಂಬಂಧದಿಂದಾಗಿ ಇಲ್ಲಿನ ನಾಗರಿಕರು ಎರಡು ದೇಶದಲ್ಲಿ ಇರುವ ಒಂದೇ ಜನ ಎಂದೆನಿಸುವುದು. ನಮ್ಮ ವಾಘಾ ಗಡಿಯಲ್ಲಿ ನೋಡಿದರೆ ಸಾಮಾನ್ಯವಾಗಿ ಎರಡು ದೇಶಗಳ ನಡುವೆ ಇರುವ ಪ್ರತ್ಯೇಕತೆಯ ಯಾವ ಗುಣಲಕ್ಷಣಗಳೂ ಕಾಣಿಸುವುದಿಲ್ಲ. ಭೂಗೋಳ, ಭಾಷೆ ಮತ್ತು ಸಂಸ್ಕೃತಿ, ಆಹಾರ ಕ್ರಮ, ಉಡುಪು ಮತ್ತು ಇನ್ನೂ ಅನೇಕ ಸಮಾನ ಅಂಶಗಳು ಎರಡೂ ದೇಶದ ಜನರನ್ನು ಭಾವನಾತ್ಮಕವಾಗಿ ಬೆಸೆದು ಒಂದು ರೀತಿಯ ಸಹಜ ಸೆಳೆತವನ್ನು ನಿರ್ಮಿಸಿಬಿಟ್ಟಿವೆ. ಸಂಕಷ್ಟದ ಸಮಯದಲ್ಲಿ ತಮ್ಮ ಸ್ವಯಂಪ್ರೇರಿತ ಅಭಿವ್ಯಕ್ತಿಯಾಗಿ ಎರಡೂ

ಜನರ ನಡುವೆ ಐಕಮತ್ಯ ಪ್ರಕಟಗೊಳ್ಳುವುದನ್ನು ನೋಡಿದ್ದೇವೆ. ಇಂಥ ಅಭಿವ್ಯಕ್ತಿಯ ಒಂದು ಉಜ್ವಲ ಉದಾಹರಣೆಯಾಗಿ ಅಂದಿನ ಪಾಕಿಸ್ತಾನದ ಅಧ್ಯಕ್ಷ ಜನರಲ್ ಅಯೂಬ್ ಖಾನ್‌ರವರು ಅಂದಿನ ಭಾರತದ ಪ್ರಧಾನಿ ಲಾಲ್‌ಬಹಾದ್ದೂರ್ ಶಾಸ್ತ್ರಿಯವರ ಸಾವಿನ ಸಂದರ್ಭದಲ್ಲಿ ನಡೆದುಕೊಂಡ ರೀತಿಯಲ್ಲಿ ಕಾಣಬಹುದು. ತಾಷ್ಕೆಂಟ್‌ನಲ್ಲಿ ಶಾಸ್ತ್ರಿಯುವರು ದಿಢೀರ್ ಸಾವನ್ನಪ್ಪಿದಾಗ ಅವರ ಶವಪೆಟ್ಟಿಗೆಯನ್ನು ಹೊರಲು ಅಯೂಬ್ ಖಾನ್‌ರು ಸ್ವತಃ ತಾವೇ ಮುಂದೆ ಬಂದು ಭಾರತಕ್ಕೆ ಹೊರಡಲು ಸಿದ್ಧವಾಗಿದ್ದ ವಿಮಾನ ದವರೆಗೂ ಹೊತ್ತು ತಂದಿದ್ದರು. ಇಂಥಾ ಭಾವನಾತ್ಮಕ ಸೆಳೆತ ಎರಡು ದೇಶದ ಜನರ ನರ–ನಾಡಿಗಳಲ್ಲಿ ಹರಿಯುತ್ತಿರುವುದನ್ನು ನಾವು ಗುರುತಿಸಬೇಕಾಗಿದೆ. ಈ ಸಹಜ ಸೆಳೆತ ಮತ್ತು ಸಂಬಂಧಗಳು ಪಟ್ಟಭದ್ರ ಹಿತಾಸಕ್ತಿಗಳ ವಿದ್ವೇಷದ ರಾಜಕಾರಣ ಮತ್ತು ಪ್ರಚಾರದ ನಡುವೆಯೂ ವರ್ಷಗಳುರುಳಿದರೂ ಉಳಿದು ಕೊಂಡು ಬಂದಿದೆ. ಹಾಗಾಗಿ ಈ ಎರಡೂ ದೇಶಗಳ ನಡುವೆ ಸಂಘರ್ಷಾತ್ಮಕ ಸಂಬಂಧವನ್ನು ಯಾವುದೇ ಆಡಳಿತಗಾರರು– ರಾಜಕೀಯ ಅಥವಾ ಸೈನ್ಯ– ತಮ್ಮ ಪಟ್ಟಭದ್ರ ವೈಯಕ್ತಿಕ ಇಲ್ಲ ರಾಜಕೀಯ ಹಿತಾಸಕ್ತಿಗಳಿಗಾಗಿ ಮುಂದುವರಿಸುವುದು ಆ ದೇಶದ ಜನರ ಸದ್ಭಾವನೆಯ ಮಾನಸಿಕತೆಗೆ ಘಾಸಿ ಮಾಡಿದಂತೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಇರುವ ಇಂಥ ದಟ್ಟವಾದ ಸೆಳೆತ ಮತ್ತು ಸಮಾನ ಅಂಶಗಳಿಗೆ ಹೋಲಿಸಿದರೆ, ಯಾವ ಪಾಕಿಸ್ತಾನ ಮತ್ತು ಚೀನಾ ದೇಶಗಳು ತಮ್ಮ ರಾಜಕೀಯ ಸ್ವಾರ್ಥ ಸಾಧನೆಗೆ ಮಿತ್ರರೆಂದು ತೋರಿಸಿಕೊಳ್ಳುತಿವೆಯೋ ಆ ದೇಶಗಳ ನಡುವೆ ಇರುವ ಸಾಮಾನ್ಯತೆಯ ಅಂಶಗಳಾದರೂ ಯಾವುವು, ಎಷ್ಟು? ಇಲ್ಲವೇ ಇಲ್ಲವೆನ್ನಿಸುವಷ್ಟು ಅತೀ ಕಡಿಮೆ, ಅದೇನೇ ಇರಲಿ, ಇಸ್ಲಾಮಾಬಾದ್, ಬೀಜಿಂಗ್‌ನೊಟ್ಟಿಗೆ ಅತಿ ನಿಕಟ ಸ್ನೇಹವನ್ನು ಬೆಳೆಸುವ ಮೊದಲು– ಚೀನಾದೊಡನೆ ಆತ್ಮೀಯ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಮಾರ್ಗದರ್ಶನ ನೀಡುವಂತ ಸುನ್ ತ್ಸು ಎಂಬ ಲೇಖಕನ 'ದಿ ಆರ್ಟ್ ಆಫ್ ವಾರ್' ಎಂಬ ಕೃತಿಯನ್ನು ಅಧ್ಯಯನ ಮಾಡುವುದು ಒಳ್ಳೆಯದು. ಪಾಕಿಸ್ತಾನಕ್ಕೆ ಇದು ಹೆಚ್ಚು ಉಪಯುಕ್ತವಾಗಬಹುದು. ಪಾಕಿಸ್ತಾನವು ತನ್ನ ಸಮೀಪ ದೃಷ್ಟಿದೋಷದಿಂದ ಈಗ ಏನೇ ಮಾಡುತ್ತಿರಲಿ, ಆದರೆ ಭಾರತವು ಆ ದೇಶವನ್ನು ಒಂದು ಸಂಭಾವ್ಯ ಮಿತ್ರ ರಾಷ್ಟ್ರವೆಂದೇ ಪರಿಗಣಿಸಬೇಕು ಮತ್ತು ತನ್ನ ಪ್ರತಿಕ್ರಿಯೆಗಳಲ್ಲಿ ಹೆಚ್ಚಿನ ಸಂಯಮವನ್ನು ಅಳವಡಿಸಿಕೊಳ್ಳಬೇಕು. ಈ ವಿಷಯದಲ್ಲಿ ನವದೆಹಲಿಗೆ ಸ್ನೇಹ ಶೀಲತೆಯ 'ಗುಜ್ರಾಲ್ ನೀತಿ'ಯು ಮಾರ್ಗದರ್ಶಕವಾಗಬೇಕು.

ಪಾಕಿಸ್ತಾನವನ್ನು ಭಾರತವು ಸಂಭಾವ್ಯ ಮಿತ್ರನೆಂದು ಪರಿಗಣಿಸಲು ಇನ್ನು ಕೆಲವು ಬಲವಾದ ಕಾರಣಗಳು ಇವೆ. ಸ್ವತಂತ್ರ ಭಾರತವು ೧೯೬೨ರಲ್ಲಿ ಚೀನಾದ ಆಕ್ರಮಣವನ್ನು ಎದುರಿಸಬೇಕಾಗಿ ಬಂದ ಸಂದರ್ಭದಲ್ಲಿ ಪಾಕಿಸ್ತಾನವು ಭಾರತಕ್ಕೆ ಅನುಕೂಲಕರವಾದ ಧೋರಣೆಯನ್ನು ಅನುಸರಿಸಿತ್ತು ಎಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕು. ಆ ಸಂದರ್ಭದಲ್ಲಿ ಭಾರತ–ಪಾಕಿಸ್ತಾನದ ಗಡಿಯಲ್ಲಿ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಬೇಕೆಂದು, ಜವಾಹರ್ಲಾಲ್ ನೆಹರುರವರ ವಿನಂತಿ ಮೇರೆಗೆ, ಅಂದಿನ ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್‌ಮಿಲನ್ ಮತ್ತು ಅಮೇರಿಕಾದ ಅಧ್ಯಕ್ಷ ಜಾನ್ ಎಫ್ ಕೆನಡಿಯವರು ಸೇರಿ ಪಾಕಿಸ್ತಾನದ ಅಧ್ಯಕ್ಷ ಜನರಲ್ ಅಯೂಬ್ ಖಾನ್‌ರವರಲ್ಲಿ ಮನವಿ ಮಾಡಿದ್ದರು ಹಾಗು ಅಯೂಬ್ ಖಾನ್‌ರವರು ಸಕಾರಾತ್ಮಕವಾಗಿ ಸ್ಪಂದಿಸಿ ಪಶ್ಚಿಮದ ಗಡಿಯಲ್ಲಿ ಯಾವ ಸಮಸ್ಯೆಯು ಉದ್ಭವವಾಗದ ರೀತಿಯಲ್ಲಿ ನೋಡಿಕೊಂಡರು. ಇದರಿಂದ ಪಶ್ಚಿಮದ ಗಡಿಯಲ್ಲಿ ಬೀಡುಬಿಟ್ಟಿದ್ದ ನಮ್ಮ ಸೇನೆಯ ತುಕಡಿಗಳನ್ನು ಹಿಮಾಲಯದ ಕಡೆಗೆ ಸ್ಥಳಾಂತರಿಸಿ ಚೀನಾದ ಆಕ್ರಮಣವನ್ನು ಎದುರಿಸಲು ಭಾರತಕ್ಕೆ ಅನುಕೂಲವಾಯಿತು.

ಈ ಎಲ್ಲ ವಿಷಯಗಳನ್ನು ಪರಿಗಣಿಸಿ ಪಾಕಿಸ್ತಾನವನ್ನು, ಅದು ಈಗ ಚೀನಾದೊಂದಿಗೆ ಗೆಳೆತನ ಬೆಳೆಸಿಕೊಂಡು ಭಾರತದ ವಿರುದ್ಧ ಅದರ ಬೆಂಬಲವನ್ನು ಕೋರುತ್ತಿರುವುದರ ಹೊರತಾಗಿಯೂ, ತನ್ನ ಸಂಭಾವ್ಯ ಮಿತ್ರನೆಂದೆ ಭಾರತವು ನೋಡಬೇಕು ಮತ್ತು ತನ್ನ ವರ್ತನೆಯಲ್ಲಿ ಅದನ್ನು ಅಭಿವ್ಯಕ್ತಿಸಬೇಕು. ದೀರ್ಘಾವಧಿಯಲ್ಲಿ ಇಂಥ ಧೋರಣೆ ಖಂಡಿತ ಫಲಪ್ರದವಾಗುತ್ತದೆ. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಪಾಕಿಸ್ತಾನದ ಭದ್ರತೆಯ ವಿಷಯವು ಭಾರತದ ಕಾಳಜಿಯಾಗಬೇಕು ಮತ್ತು ಎರಡೂ ದೇಶಗಳು ತಮ್ಮ ವಿದೇಶಾಂಗ ನೀತಿಯನ್ನು, ಕಾಶ್ಮೀರವು ಒಂದು ವಿವಾದಿತ ವಿಷಯವೆಂದು ಮುಂದುವರೆಸುವುದನ್ನು ಬಿಟ್ಟು, ಇನ್ನೂ ಉದಾತ್ತವಾದ ಆಲೋಚನೆಗಳ ಮತ್ತು ವಿಸ್ತಾರವಾದ ಚೌಕಟ್ಟಿನ ಆಧಾರದಲ್ಲಿ ರೂಪಿಸಿಕೊಳ್ಳಬೇಕು. ಈ ನಿಟ್ಟಿನ ನೀತಿ ನಿರೂಪಣೆಯು ದಿವಂಗತ ಜಯಪ್ರಕಾಶ್ ನಾರಾಯಣ ಅವರು ಸೂಚಿಸಿದ ಹಾಗೆ ಭಾರತ ಮತ್ತು ಪಾಕಿಸ್ತಾನದ ನಡುವೆ ಒಂದು ಒಕ್ಕೂಟ ರಚಿಸಿಕೊಳ್ಳುವುದರ ಮೂಲಕ ಸಾಧಿತವಾಗಬಹುದೋ ಎಂದು ಪರಿಶೀಲಿಸಿ ತಮ್ಮ ವಿಸ್ತಾರವಾದ ಹಿತಾಸಕ್ತಿಗಳಿಗೆ ಅನುಗುಣವಾಗಿ ಮತ್ತು ಭಾರತ ಉಪಖಂಡವನ್ನು ಜಗತ್ತಿನ ಬಲಿಷ್ಠ ರಾಷ್ಟ್ರಗಳು ತಮ್ಮ ಸ್ವಾರ್ಥ ಸಾಧನಗೆ, ಪರಿಸ್ಥಿತಿಯನ್ನು ಹದಗೆಡಿಸಿ, ಪರಸ್ಪರರ ನಡುವೆ ಹಗೆತನವನ್ನು ಬೆಳೆಸುವುದನ್ನು ತಡೆಯಲು ಬಳಸಿಕೊಳ್ಳಬೇಕು.

ಇತ್ತೀಚಿನ ಉರಿ ಸೇನಾ ನೆಲೆಯ ಮೇಲಿನ ಭಯೋತ್ಪಾದಕರ ದಾಳಿ ಮತ್ತು ಭಾರತದ ನಿರ್ದಿಷ್ಟ ಪ್ರತಿದಾಳಿಯಿಂದ ಉಭಯ ದೇಶಗಳ ಸಂಬಂಧ ಸಾಕಷ್ಟು ಹದಗೆಟ್ಟು ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಾಣ ಮಾಡಿದೆ. ಇಂತದ್ದೇ ಪ್ರಕ್ಷುಬ್ಧ ವಾತಾವರಣವು ಎರಡೂ ದೇಶಗಳ ಸಂಬಂಧದಲ್ಲಿ ಈ ಹಿಂದೆ ಕೂಡ ೧೯೪೭, ೧೯೬೫, ೧೯೭೧ ಮತ್ತು ೧೯೯೯ರಲ್ಲಿ ನಿರ್ಮಾಣ ವಾಗಿದ್ದು ನಿರರ್ಥಕ ಯುದ್ಧದಲ್ಲಿ ಪರ್ಯವಸಾನಗೊಂಡಿತ್ತು. ಉರಿ ಹತ್ಯಾಕಾಂಡವು ಭಾರತೀಯರ ಭಾವನೆಗಳನ್ನು ಸಾಕಷ್ಟು ಕೆರಳಿಸಿದೆ. ಅಪ್ರಬುದ್ಧ ಆಡಳಿತಗಾರರ ಕೈಯಲ್ಲಿ ಇಂಥ ಸನ್ನಿವೇಶವು ಯುದ್ಧದ ಕಿಡಿಯನ್ನು ಸಹ ಹೊತ್ತಿಸಬಲ್ಲದು.

ನಮಗೆಲ್ಲ ಗೊತ್ತಿರುವ ಸಂಗತಿ ಏನೆಂದರೆ, ಪಾಕಿಸ್ತಾನದಲ್ಲಿ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ, ಭಾರತದಲ್ಲಿದ್ದಂತೆ, ಸಂಪೂರ್ಣವಾಗಿ ನಾಗರೀಕ ಆಡಳಿತಗಾರರ ಹಿಡಿತದಲ್ಲಿಲ್ಲ. ಬದಲಾಗಿ ನಾಗರಿಕ ಆಡಳಿತಗಾರರ ಬೆನ್ನ ಹಿಂದಿನಿಂದ ಅಲ್ಲಿನ ಸೇನಾಡಳಿತವು ರಾಜಕೀಯ ಸ್ವರೂಪದ ನಿರ್ಧಾರವನ್ನು ತೆಗೆದುಕೊಂಡು ಅದರ ಸಂಪೂರ್ಣ ಜವಾಬ್ದಾರಿಯನ್ನು ನಾಗರಿಕ ಆಡಳಿತಗಾರರ ಮೇಲೆ ಹೊರಿಸುವಂಥ ಪರಿಪಾಠ ಬೆಳೆದು ಬಂದಿದೆ. ೧೯೯೯ರ ಕಾರ್ಗಿಲ್ ಯುದ್ಧ ನಡೆದದ್ದೂ ಹೀಗೆ. ಕಾರ್ಗಿಲ್ ಯುದ್ಧವನ್ನು ಯೋಜಿಸಿ ಜಾರಿಗೊಳಿಸಿದ್ದು ಅಂದಿನ ಪಾಕಿಸ್ತಾನದ ಸೇನಾ ಮುಖ್ಯಸ್ಥ ಪರ್ವೀಜ್ ಮುಶ್ರಫ್ ಮತ್ತು ಯುದ್ಧದ ಈ ನಿರ್ಧಾರವು ಪಾಕಿಸ್ತಾನದ ಅಂದಿನ ಪ್ರಧಾನಿ ನವಾಜ್ ಷರೀಫ್‌ರವರಿಗೆ ತಿಳಿದಿರಲಿಲ್ಲವೆಂಬ ಕಟು ಸತ್ಯವನ್ನು ಅವರೇ ಸ್ವತಃ ಭಾರತದ ಅಂದಿನ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡಿಸ್ ರವರಲ್ಲಿ ತೋಡಿಕೊಂಡಿದ್ದರು.

ಇಂಥ ಸಾಧ್ಯತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನವದೆಹಲಿಯು ಪಾಕಿಸ್ತಾನದ ವಿಷಯದಲ್ಲಿ ತನ್ನ ಪ್ರತಿಕ್ರಿಯೆಗಳಲ್ಲಿ ಅತ್ಯಂತ ಹೆಚ್ಚಿನ ಸಂಯಮವನ್ನು ಪ್ರದರ್ಶಿಸಬೇಕಾಗುತ್ತದೆ. ಯುದ್ಧವೊಂದೇ ಪರಿಹಾರವಲ್ಲ ಮತ್ತು ಅದನ್ನೇ ವೈಭವೀಕರಿಸುವುದನ್ನು ನಿಲ್ಲಿಸಬೇಕು. ಅಸಂತೋಷ ಮತ್ತು ಆಕ್ಷೇಪಣೆಗಳನ್ನು ಅಭಿವ್ಯಕ್ತಿಸಲು ಬೇರೆ ಮಾರ್ಗಗಳೂ ಇವೆ. ಈಚೆ ೨೦ ಸಾವು ಮತ್ತು ಆಚೆ ೩೮ ಸಾವು ಎನ್ನುವ ರೀತಿಯಲ್ಲಿ ಬಿಕ್ಕಟ್ಟನ್ನು ಎದುರಿಸುವುದರಲ್ಲಿ ಯಾವ ಮಹತ್ಸಾಧನೆ ಇದೆ? ಇಂಥ ವಿಧಾನಗಳು ತೀರಾ ಕೆಳ ಮಟ್ಟದ್ದು. ಪರ್ಯಾಯವಾಗಿ ಇಂಥ ಬಿಕ್ಕಟ್ಟಿನ ಸನ್ನಿವೇಶಗಳಲ್ಲೂ 'ಗುಜ್ರಾಲ್ ನೀತಿ"ಯ ಸ್ಫೂರ್ತಿ ಮತ್ತು ಆಶಯಗಳು ನಮ್ಮ ಪ್ರತಿಕ್ರಿಯೆಗಳನ್ನು ರೂಪಿಸಬೇಕು. ಇಂಥ ನಿಲುವು ದೀರ್ಘಾವಧಿಯಲ್ಲಿ ಖಂಡಿತ ಉತ್ತಮ ಫಲಿತಾಂಶವನ್ನು ನೀಡುತ್ತದೆ.

ಭಾರತ-ಪಾಕ್ ಸಂಬಂಧವನ್ನು ಸುಧಾರಿಸಲು ಮತ್ತು ಸ್ನೇಹ ಮತ್ತು ಸಹಕಾರದ ಆಧಾರದ ಮೇಲೆ ಅದನ್ನು ಹೊಸ ದಿಕ್ಕಿನಲ್ಲಿ ಕೊಂಡೊಯ್ಯಲು ಈಗಿನ ಪಾಕ್ ಪ್ರಧಾನಿ ನವಾಜ್ ಷರೀಫ್‌ರವರೇ ಉತ್ತಮ ಆಯ್ಕೆ. ಉಭಯ ದೇಶಗಳ ಸಂಬಂಧದಲ್ಲಿ ಈಗ ಶ್ರಮ ಮತ್ತು ಸಂಪನ್ಮೂಲವನ್ನು, ಕೆಲವೇ ವರ್ಷಗಳಲ್ಲಿ ತುಕ್ಕು ಹಿಡಿದು ಗುಜರಿಗೆ ಸೇರುವಂತಹ . ಶಸ್ತ್ರಾಸ್ತ್ರಗಳನ್ನು ಗುಡ್ಡೆ ಹಾಕಲು ಬಳಸುವುದನ್ನು ನಿಲ್ಲಿಸಿ ದೇಶದ ಜನರ ಕ್ಷೇಮಾಭಿವೃದ್ಧಿಗೆ ಬಳಸುವ ಹೊಸ ನೀತಿಯನ್ನು ಅನುಸರಿಸಲೇಬೇಕಾಗಿದೆ. ಪಾಕಿಸ್ತಾನವು ಕಾಶ್ಮೀರದ, ಮೇಲಿನ ತನ್ನ, ತೀರಾ ಅಸಮ್ಮತವಾದ, ಹಕ್ಕನ್ನು ಪ್ರತಿಪಾದಿಸುವುದನ್ನು ಬಿಟ್ಟು ಭಾರತದ ಬಗೆಗಿನ ತನ್ನ ಮೂಲ ನಿಲುವನ್ನು ಸ್ನೇಹ ಮತ್ತು ಸಹಕಾರದ ತಳಹದಿಯಲ್ಲಿ ರೂಪಿಸಿಕೊಳ್ಳಬೇಕು. ಜೆಎನ್‌ಯುನ ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನ ಕೇಂದ್ರದಲ್ಲಿ ಕಾಶ್ಮೀರದ ಕಣಿವೆಯಿಂದ ಬಂದ ನನ್ನ ಒಬ್ಬ ಆತ್ಮೀಯ ವಿದ್ಯಾರ್ಥಿ ಮಿತ್ರ ಹೇಳುತ್ತಿದ್ದದೇನೆಂದರೆ, ಕಾಶ್ಮೀರಕ್ಕೆ ಪಾಕಿಸ್ತಾನದ ಮೇಲಿನ ಒಲವಿಗೆ ಮುಖ್ಯ ಕಾರಣ ಸುಲಭವಾಗಿ ಎಟಕುವ ಮಾರುಕಟ್ಟೆಗಳು ಮತ್ತು ವ್ಯಾಪಾರದ ಹಿತಾಸಕ್ತಿಗಳೆ ಆಗಿದೆ ಎಂದು. ಹಾಗಾಗಿ ಕಾಶ್ಮೀರದಲ್ಲಿ ಭಾರತ-ಪಾಕ್ ಗಡಿಯನ್ನು ಸಡಿಲವಾಗಿಟ್ಟು ಪಾಕಿಸ್ತಾನದ ಈ ಹಿತಾಸಕ್ತಿಯನ್ನು ಕಾಪಾಡಬೇಕು. ಸಹಕಾರದ ಮತ್ತು ಐಕಮತ್ಯದ ಚೌಕಟ್ಟಿನಲ್ಲಿ ರೂಪಿತವಾದ ಭಾರತ-ಪಾಕಿಸ್ತಾನ ಸಂಬಂಧದಿಂದ ಈ ಕಾರ್ಯ ಅಸಾಧ್ಯವೇನಲ್ಲ.

– ಸದಾರ

(ಜನತಾ ಮತ್ತು ಹೊಸ ಮನುಷ್ಯ)

ಮಾತೃಭಾಷೆ, ಭಾವಾವೇಷ ಮತ್ತು ಜಾಗತೀಕರಣ

–ಶಕೀರ್ ಜಬೀನ್ ಬಿ

೧೯೯೯ರಲ್ಲಿ ಯುನೆಸ್ಕೋ ಸಂಸ್ಥೆಯು ಫೆಬ್ರವರಿ ೨೧ನ್ನು ಅಂತರಾಷ್ಟ್ರೀಯ ಮಾತೃಭಾಷಾ ದಿವಸವೆಂದು ಘೋಷಿಸಿತು. ೧೯೫೨ ಫೆಬ್ರವರಿ೧ ರಂದು ಇಂದಿನ ಬಾಂಗ್ಲಾದೇಶದಲ್ಲಿ ನಾಲ್ಕು ಜನ ಯುವಕರು ಬಂಗಾಲಿ ಭಾಷೆಯ ಸಮರ್ಥನೆಗಾಗಿ ಪೋಲಿಸರ ಗುಂಡಿಗೆ ಆಹುತಿಯಾದರಂದು ಅವರನ್ನು ಹುತಾತ್ಮರೆಂದು ಪರಿಗಣಿಸಲಾಯಿತು. ಅವರು ಹುತಾತ್ಮವಾದ ದಿನವನ್ನು ಪ್ರತಿ ವರ್ಷವೂ "ಅಂತರಾಷ್ಟ್ರೀಯ ಮಾತೃಭಾಷಾ ದಿನ"ವೆಂದು ಆಚರಿಸಿಕೊಂಡು ಬರಲಾಗುತ್ತಿದೆ. ಅದೇ ವರ್ಷ ಡಿಸೆಂಬರ್ ೧೫, ೧೯೫೨ರಂದು ಶ್ರೀಪೊಟ್ಟಿರಾಮುಲು ೫೮ ದಿನ ಆಮರಣ ಉಪವಾಸ ಮಾಡಿ, ತೆಲುಗು ಭಾಷೆಗಾಗಿ ಪ್ರತ್ಯೇಕ ರಾಜ್ಯಬೇಕೆಂಬ ಬೇಡಿಕೆ ಇಟ್ಟಿದ್ದರು. ಇಂಥದೆ ಘಟನೆಗಳು ಸ್ವತಂತ್ರ ಭಾರತದಲ್ಲಿ ದೇಶದ ತುಂಬ ನಡೆದಿವೆ.

ವ್ಯಕ್ತಿಗಳು ತಮ್ಮ ಭಾಷೆಯ ಬಗ್ಗೆ ಹೊಂದಿರುವ ಭಾವೋದ್ವೇಗ ಮತ್ತು ಭಾವನಾತ್ಮಕ ಸಂಬಂಧ ಇತ್ಯಾದಿಗಳು ೨೦ನೇ ಶತಮಾನದ ವಿಶಿಷ್ಟ ಬೆಳವಣಿಗೆ. ಈ ಘಟನೆಗಳ ನಂತರ ಪುನರ್‌ರಚನೆಯಾದ ಪ್ರಾಂತಗಳು ಭಾಷೆಯ ಆಧಾರದ ಮೇಲೆಯೇ ಆದವು. ಅಧಿಕಾರ, ಪ್ರಾಪ್ತಿ ಪ್ರಾದೇಶಿಕ ಏಕೀಕರಣ, ಮತ್ತು ಅಸ್ಮಿತೆಗಳು, ಭಾಷೆಯ ಹೆಸರಿನಲ್ಲಿಯೇ ನಡೆದವು.

ಭಾರತದ ಜನಗಣನೆ ಪ್ರಕಾರ ಮಾತೃಭಾಷೆ ಎಂದರೆ "ಓರ್ವ ವ್ಯಕ್ತಿಯೊಂದಿಗೆ ಅವನ ತಾಯಿ ಆಡುವ ಭಾಷೆ" ಒಂದು ವೇಳೆ ತಾಯಿಯು ವ್ಯಕ್ತಿಯ ಬಾಲ್ಯದಲ್ಲಿಯೇ ತೀರಿಕೊಂಡಿದ್ದರೆ, ಆ ವ್ಯಕ್ತಿಯ ಮನೆಯಲ್ಲಿ ಆಡುವ ಭಾಷೆಯೆ ಮಾತೃಭಾಷೆ. ಡಿ.ಪಿ.ಪಟ್ನಾಯಕ್ ಅವರ ಪ್ರಕಾರ 'ಮಾತೃಭಾಷೆ' ಎಂಬುದು ಇತ್ತೀಚಿಗೆ ಬಂದಿರುವ ವಿಚಾರ. ಆ ಶಬ್ದ ಭಾರತೀಯ ಭಾಷೆಗಳಲ್ಲಿ ಕಾಣಿಸಿಕೊಂಡದ್ದು ೧೮ನೇ ಶತಮಾನದಲ್ಲಿ, ಅದು ಇಂಗ್ಲೀಷ್ ಭಾಷೆಯ "ಮದರ್ ಟಂಗ್"ಎಂಬ ಮಾತಿನ ಶಬ್ಧಶಃ ಅನುವಾದ. ಇಂಗ್ಲೀಷ್ ಭಾಷೆಯಲ್ಲಿ ಆ ಶಬ್ದದ ಉಪಯೋಗ ೧೧ ಮತ್ತು ೧೨ ನೇ ಶತಮಾನದಲ್ಲಿ ಪ್ರಥಮ ಬಾರಿಗೆ ಆಯಿತು. ಅಲೀಫರ್ ಸಂಸ್ಥೆಯ ಗೆಜೆಟಿಯರ್ ಪ್ರಕಾರ ಆ ಶಬ್ದದ ವ್ಯುತ್ಪತ್ತಿ ಉರ್ದು ಭಾಷೆಯ "ಮುಸ್ತಬೀಸ್–ಕೀ–ಜುಬಾನ್". ಇದರ ಅರ್ಥ

ಉಸಿರು ಮತ್ತು ಲವಲವಿಕೆ. ಭಾರತದಲ್ಲಿ ವಾಗ್‌ಭಾಷೆಗಳು ಇದ್ದವು. ಅವುಗಳನ್ನು ಇಂಗ್ಲೀಷ್‌ರು ಪ್ರಾದೇಶಿಕ ಭಾಷೆಗಳೆಂದು ಕರೆದರು. ಕೆಲವೇ ಭಾಷೆಗಳಿಗೆ ಲಿಪಿಯಿತ್ತು.

ವಾಗ್‌ಭಾಷೆಯ ಅಭಿವೃದ್ಧಿಯಲ್ಲಿ ಮೂರು ಹಂತಗಳನ್ನು ಗುರುತಿಸಬಹುದು. ಅವುಗಳನ್ನು ಹೆಸರಿಸುವುದು; ಅಭಿವೃದ್ಧಿಗೊಳ್ಳುವುದು ಮತ್ತು ಅಲಕ್ಷಕ್ಕೆ ಒಳಗಾಗಿಸುವುದು.

ಮೊದಲನೇ ಹಂತದಲ್ಲಿ ೧೮ನೇ ಶತಮಾನದ ಭಾಷಾ ಶಾಸ್ತ್ರಜ್ಞರು ಭಾಷೆಗಳನ್ನು ವರ್ಗೀಕರಿಸಿದರು ಮತ್ತು ವ್ಯವಸ್ಥಿತಗೊಳಿಸಿದರು ಹಾಗೂ ಅವುಗಳ ಹುಟ್ಟುವಿಕೆಯ ಆಧಾರದ ಮೇಲೆ ಅವುಗಳನ್ನು ಹೆಸರಿಸಿದರು.

ಈ ಭಾಷೆಗಳು ವಸಾಹತು ಆಡಳಿತ ಕಾಲದಲ್ಲಿ ಕಂದಾಯದ ಸಂಗ್ರಹದಲ್ಲಿ, ಜಿಲ್ಲೆಗಳ ರಚನೆಯಲ್ಲಿ, ಶಿಕ್ಷಣದಲ್ಲಿ ಮತ್ತು ಧಾರ್ಮಿಕ ಆಚರಣೆಗಳಲ್ಲಿ ಉಪಯೋಗಿಸಲ್ಪಡುತ್ತಿದ್ದವು. ಸ್ಥಾನೀಯ ಭಾಷೆಗಳ ಸ್ಥಾನವನ್ನು ಉನ್ನತಿಕರಿಸಿ ಇಂಗ್ಲೀಷ್ ಭಾಷೆಗೆ ಒಂದು ಸ್ಥಾನವನ್ನು ಕೊಟ್ಟಿದ್ದು ಸ್ಥಳೀಯರಿಗೆ ಉತ್ತಮ ಜೀವನದ ಅವಕಾಶಗಳು ತೆರೆದವು. ಅದರಿಂದಾಗಿ ಎರಡು ಜೋಡಿ ಪದಗಳು ಹುಟ್ಟಿಕೊಂಡವು. ಅವು ಮಾತೃ ಮತ್ತು ಭಾಷೆ. ಈ ರೀತಿ ಮಾತೃ ಭಾಷೆಗಳ ಉಗಮವಾಗಿ ಅವುಗಳನ್ನು ಮಾನವಶಾಸ್ತ್ರದ ಬೆಳವಣಿಗೆಯ ಕುರುಹನ್ನಾಗಿ ಗುರುತಿಸಿದರು.

ರವೀಂದ್ರನಾಥ್ ಠಾಕೂರ್‌ರವರು ಆ ಬೆಳವಣಿಗೆಯನ್ನು ಭೌಗೋಳಿಕ ವಿಗ್ರಹಾರಾಧನೆ ಎಂದು ಕರೆದರು! ಭೂಮಿ ಮತ್ತು ಭಾಷೆಯನ್ನು "ಮಾತಾ" ಎಂಬ ರೂಪದಲ್ಲಿ ಸಂಯೋಜಿಸಲಾಯಿತು ಮತ್ತು ಅದನ್ನೇ ಪ್ರಾದೇಶಿಕ ಹಂತದಲ್ಲಿ ಪುನರ್‌ರಚಿಸಲಾಯಿತು. ಭಾಷಾವಾರು ಪ್ರಾಂತ್ಯ ರಚನೆಯಿಂದಾಗಿ ಕೆಲವು ಭಾಷೆಗಳು ರಾಜ್ಯ ಭಾಷೆಯಾಗಿ ಮಾರ್ಪಾಟ್ಟವು. ಸಂವಿಧಾನವು ಎಂಟನೇ ಪರಿಶಿಷ್ಟದ ಮೂಲಕ ಕೆಲವು ಭಾಷೆಗಳಿಗೆ ಉನ್ನತ ಸ್ಥಾನವನ್ನು ಕೊಟ್ಟಿತು. ಇದು ಮಾರು ವೇಶದಲ್ಲಿ ಭಾಷೆಗಳ ಮಧ್ಯೆ ಹೋರಾಟಕ್ಕೆ ಕಾರಣವಾಯಿತು. ಪ್ರತಿಯೊಂದು ಭಾಷೆಯು ಹೆಚ್ಚು ಜಾಗ, ಹೆಚ್ಚು ಪ್ರಭಾವ ವಲಯ ಮತ್ತು ಅಧಿಕಾರಕ್ಕಾಗಿ ಸೆಣಸಾಡಲು ಪ್ರಾರಂಭಿಸಿತು. ರಾಜ್ಯ ಭಾಷೆಯ ಸ್ಥಾನವನ್ನು ಪಡೆಯಲಿಕ್ಕಾಗದ ಸಣ್ಣ ಭಾಷೆಗಳು ಇಂಗ್ಲೀಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಯ ಭೀತಿಯನ್ನು ಎದುರಿಸಬೇಕಾಗಿ ಬಂತು. ಮುಂದುವರೆದ ಆರ್ಥಿಕ ಅಸಮಾನತೆಯ ಕಾರಣದಿಂದಾಗಿ ಸಮಾಜದ ಬಡ ಜನರು ವಿಶೇಷ ಅವಕಾಶಗಳಿಗಾಗಿ ಮತ್ತು ಉತ್ತಮಜೀವನಕ್ಕಾಗಿ ಇಂಗ್ಲೀಷ್‌ಗೆ ಮೊರೆ ಹೋಗಲು

ಪ್ರಾರಂಭಿಸಿದರು.

ಆರ್ಥಿಕ ಜಾಗತೀಕರಣವು ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳನ್ನು ಒಟ್ಟಿಗೆ ಕಟ್ಟಿ ಹಾಕಿತು. ಭಾಷೆ ಮತ್ತು ಶಿಕ್ಷಣ ಇವುಗಳ ಮಧ್ಯೆ ನೇರವಾದ ಸಂಬಂಧವಿದೆ. ಜಾಗತೀಕರಣವು ಶಿಕ್ಷಣ, ಭಾಷೆ ಮತ್ತು ಮಾನವ ಸಂಪನ್ಮೂಲಗಳನ್ನು ವಸ್ತುಗಳನ್ನಾಗಿ ಪರಿವರ್ತಿಸಿತು. ಈ ಪರಿವೇಶದಲ್ಲಿ ಭಾಷೆಯೊಂದಿಗೆ ಭಾವನಾತ್ಮಕ ಸಂಬಂಧಕ್ಕೆ ಎಡೆ ಎಲ್ಲಿವೆ? ಮಾತೃಭಾಷೆಗಳಿಗಾಗಿ ಮೀಸಲಾಗಿದ್ದಂಥ ಪ್ರಭಾವ ವಲಯದಲ್ಲಿ ಜಾಗತಿಕ ಭಾಷೆಯೊಂದು ಆಕ್ರಮಿಸಿಕೊಂಡಿದೆ.

ಮಾತೃಭಾಷೆಗಳ ಮೇಲೆ ಜಾಗತಿಕರಣದ ಪ್ರಭಾವ ಸಂಕೀರ್ಣವಾಗಿದೆ. ಈಗ ಅದು ಕೇಂದ್ರ ಮತ್ತು ಪರಿಧಿಯಂಥ ವಿಭಾಗವಾಗಿ ಮಾತ್ರ ಉಳಿದಿಲ್ಲ. ಇಂಗ್ಲೀಷ್ ಭಾಷೆಯ ದಾಳಿಯಿಂದ ರಕ್ಷಣೆ ಕೊಡುವುದೊಂದೆ ಭಾಷೆಗಳ ಉಳಿಯುವಿಕೆಗೆ ಸಾಲದೆಂದು ತೋರುತ್ತದೆ. ರಾಜ್ಯ ಸರ್ಕಾರಗಳು ಪ್ರದೇಶ ಭಾಷೆಗಳ ರಕ್ಷಣೆಯ ಬದಲಾಗಿ, ಅವುಗಳನ್ನು ಉಳಿಸಬೇಕಾದಂಥ ಕ್ರಮದ ಮೇಲೆ ಒತ್ತು ಕೊಡಬೇಕಾಗಿ ಬಂದಿದೆ. ಶಿಕ್ಷಣದಲ್ಲಿ ಜಿಲ್ಲಾ ಮಟ್ಟದ ಭಾಷಾ ನೀತಿ ಭಾಷಾ ವೈವಿಧ್ಯತೆಯನ್ನು ಮುನ್ನಲೆಗೆ ಬೇಕಾಗಿದೆ.

ಆಂಧ್ರ ಪ್ರದೇಶದ ೪೮ನೇ ರಾಜ್ಯೋತ್ಸಹದ ಸಂಧರ್ಭದಲ್ಲಿ ಪ್ರಕಟಗೊಂಡ ಚಿತ್ರವನ್ನು ಲೀಸಾ ಮಿಚಲ್ ಹೀಗೆ ಜ್ಞಾಪಿಸಿಕೊಳ್ಳುತ್ತಾರೆ. ಚಿತ್ರದಲ್ಲಿ ಮಾಲೆ ಹಾಕಿದ ತೆಲುಗು ಮಾತೆಯನ್ನು ತೋರಿಸಲಾಗಿದೆ. ಆ ವಿಗ್ರಹದ ಪೀಠದ ಮೇಲೆ ಇಂಗ್ಲೀಷ್ ಬರಹವಿದೆ! ಇದು ಭಾರತದಲ್ಲಿ ಪ್ರತಿಯೊಂದು ಮಾತೃಭಾಷೆಯ ಸ್ಥಿತಿಯನ್ನು ಬಿಂಬಿಸುತ್ತದೆ. ೧೮ನೇ ಶತಮಾನದಲ್ಲಿ ಪ್ರಾರಂಭವಾಗಿದ್ದ ಮಾತೃಭಾಷೆಗಳ ಅಭಿವೃದ್ಧಿಯ ಕೆಲಸ, ೧೯ನೇ ಮತ್ತು ೨೦ ನೇ ಶತಮಾನದಲ್ಲಿ ಶಿಕ್ಷಣ ಕ್ಷೇತ್ರದಿಂದ ಪೂರ್ಣವಲ್ಲದಿದ್ದರೂ ಭಾಗಶಃ ನಿರಾಕರಿಸುವ ಹಂತಕ್ಕೆ ತಲುಪಿತು.

ವಿಚಿತ್ರವೇನೆಂದರೆ ಜನರು ಪರಸ್ಪರರಲ್ಲಿ ನಿಮ್ಮ ಮಾತೃಭಾಷೆ ಯಾವುದೆಂದು ಕೇಳದೆ ನಿಮ್ಮ ಮನೆಯಲ್ಲಿ ಯಾವ ಭಾಷೆಯನ್ನು ಆಡುತ್ತೀರಿ ಎಂದು ಕೇಳುವುದು.

(ಡೆಕಾನ್ ಹೆರಾಲ್ಡ್)
ಸಾಭಾರ ಅನು. ಸು.ಕೌ

ತಪ್ಪನ್ನು ಒಪ್ಪಿಕೊಳ್ಳೋಣ, ಅಪ್ಪಿಕೊಳ್ಳದಿರೋಣ

–ಡಾ.ಕೆ. ಜಗದೀಶ್ ಪೈ

ನಮ್ಮಿಂದ ತಪ್ಪಾಗುವುದು ಬೇರೆ. ನಾವು ತಪ್ಪು ಮಾಡುವುದು ಬೇರೆ; ತಪ್ಪು 'ಆಗುವುದಕ್ಕೂ, 'ಮಾಡು'ವುದಕ್ಕೂ ವ್ಯತ್ಯಾಸವೇನು? ನಮಗೆ ಗೊತ್ತಿಲ್ಲದೆಯೆ ಅದು "ಆಗುತ್ತದೆ; ಗೊತ್ತಿದ್ದೂ ಗೊತ್ತಿದ್ದೂ ನಾವು ಇದನ್ನು 'ಮಾಡುತ್ತೇವೆ, ತಿಳಿದೂ ತಿಳಿದೂ ಮಾಡುವ ಅಪರಾಧವು ತಿಳಿಯದೇ ಆಗಿಹೋದ ತಪ್ಪಿಗಿಂತ ಘೋರ.

ಮನುಷ್ಯನ ಜೀವನವೆಂದರೆ ತಪ್ಪುಗಳ ಸರಮಾಲೆ. ಪ್ರಾಯಶಃ ತಪ್ಪುಮಾಡದ ವ್ಯಕ್ತಿ ಜಗತ್ತಿನಲ್ಲಿ ಯಾರೂ ಇರಕ್ಕಿಲ್ಲ. ತಪ್ಪೇ ಮಾಡದ ಬದುಕು ಒಂದು ರೀತಿಯಲ್ಲಿ ನೀರಸ. ಅಂತಹ ಬದುಕಿನಲ್ಲಿ ಜೀವಂತಿಕೆ ಇಲ್ಲ. ತಪ್ಪು ಮಾಡದ ಬದುಕಿನಲ್ಲಿ ಬೆಳವಣಿಗೆ ಎಂಬುದು ಕುಂಠಿತವಾಗಿರುತ್ತದೆ. ಈ ದೃಷ್ಟಿಯಿಂದಲೇ "ತಪ್ಪು ಮಾಡಲು ಇಲ್ಲದಿರುವ ಸ್ವಾತಂತ್ರ್ಯ ಅದು ಸ್ವಾತಂತ್ರ್ಯವೇ ಅಲ್ಲ"– ಎಂಬುದಾಗಿ ಗಾಂಧಿಯವರು ಹೇಳಿದ್ದಾರೆ.

ತಪ್ಪು ಮಾಡಿಯೇ ಮನುಷ್ಯ ಅದರ ಅನುಭವದಿಂದ ಬೆಳೆಯುತ್ತಾನೆ. ಎಲ್ಲವೂ ಸರಿಯಾಗಿಯೇ, ಸಮಸ್ಯೆಯಿಲ್ಲದೆ ನಡೆದರೆ ಅಚಿತಹ ಅನುಭವ ಪಕ್ವತೆಯನ್ನು ಪಡೆದಿಲ್ಲ ಎಂದರ್ಥ. ಪ್ರಬುದ್ಧ ಅನುಭವವೆಂದರೆ ಸರಿ–ತಪ್ಪುಗಳ ಮೊತ್ತ. ಜಗತ್ತಿನ ಸಾಧಕರೆಲ್ಲರೂ ಮೊದಲು ತಪ್ಪು ಮಾಡಿಯೇ ಬೆಳೆದವರು. ತಪ್ಪಾದಾಗ ತಿದ್ದಿಕೊಂಡು ಮುಂದುಡಿಯಿಡುವವರನ್ನೇ ಸಾಧಕರೆನ್ನುತ್ತಾರೆ. ಹಿಮಾಲಯದಂಥ ಪರ್ವತವನ್ನು ಪರ್ವತವನ್ನು ಹತ್ತುವಾಗ ಹಲವು ಬಾರಿ ಜಾರುತ್ತಾರೆ. ಏಳು–ಬೀಳುಗಳನ್ನು ಸಂಭಾಳಿಸಿ ಮುಂದುವರಿದಾಗಲೇ ಪರ್ವತಾರೋಹಿ ಶಿಖರದ ತುತ್ತತುದಿಗೆ ತಲಪಲು ಸಮರ್ಥನಾಗುತ್ತಾನೆ.

ಸಪ್ತ ಸಮುದ್ರಗಳನ್ನಾದರೂ ಸುಸೂತ್ರವಾಗಿ ದಾಟಬಹುದು. ಆದರೆ ಈ ಭವಸಾಗರವನ್ನು ತಪ್ಪು ಮಾಡದೇ ದಾಟಲು ಸಾಧ್ಯವೇ ಇಲ್ಲ. ಏಕೆಂದರೆ ಜೀವನ ಸಾಗಿಸುವಾಗ ಇಡುವ ಪ್ರತಿಯೊಂದು ಹೆಜ್ಜೆಯೂ ತಪ್ಪಾಗಿರಬಹುದು ಅಥವಾ ಸರಿಯಾಗಿರಲೂಬಹುದು. ಇದು ಸರಿ, ಇದು ತಪ್ಪು ಎಂಬುದಾಗಿ ನಿರ್ಣಾಯಕವಾಗಿ ಹೇಳಲಾಗುವುದಿಲ್ಲ. ಇಂದು ಏನು ಸರಿಯೋ, ಅದು

ನಾಳೆಯ ಹೊತ್ತಿಗೆ ತಪ್ಪಾಗಲೂಬಹುದು. ಈ ಕ್ಷಣದಲ್ಲಿ ಯಾವುದು ತಪ್ಪೋ ಅದು ಮರುಕ್ಷಣದಲ್ಲಿ ಸರಿಯೂ ಆಗಬಹುದು. ಜಗತ್ತಿನಲ್ಲಿ ಯಾವುದೂ ಪೂರ್ಣ ಸರಿಯಾಗುವುದಿಲ್ಲ. ನಿಖರವಾಗಿ ಸಮಯ ತೋರಿಸುವ ಗಡಿಯಾರ ಕೂಡ ನಮ್ಮ ಪಾಲಿಗೆ ಸರಿಯಾಗಿರಬಹುದು. ಆದರೆ ಜಗತ್ತಿನ ಇನ್ನೊಂದು ಭಾಗದವರಿಗೆ ಅದು ತಪ್ಪಾಗಿರುತ್ತದೆ. ಅದೇ ರೀತಿ ಜಗತ್ತಿನಲ್ಲಿ ಯಾವುದೂ ಪೂರ್ಣ ತಪ್ಪಾಗಿರುವುದಿಲ್ಲ. ಸಂಪೂರ್ಣ ನಿಂತುಹೋಗಿರುವ ಗಡಿಯಾರ ಕೂಡ ದಿನದಲ್ಲಿ ಎರಡು ಸಲ ಸರಿಯಾಗಿರುತ್ತದೆ.

ಮುಗ್ಗರಿಸುವುದು ಸಹಜ

ಇಂಗ್ಲಿಷಿನಲ್ಲಿ ಒಂದು ಮಾತಿದೆ "if everything is coming everyway, then you are in the wrong lane" ಎಂಬುದಾಗಿ. ಜೀವನದಲ್ಲಿ ಎಲ್ಲವೂ ಸರಿಯಾಗಿದ್ದರೆ ನಾವು ತಪ್ಪು ಹಾದಿಯಲ್ಲಿದ್ದೇವೆ ಎಂದರ್ಥ. ಯಾಕೆಂದರೆ ಸರಿದಾರಿಯಲ್ಲಿ ಕೂಡ ನಡೆಯುವಾಗ ನಮ್ಮಿಂದ ತಪ್ಪಾಗುವ ಸಂಭವ ಇದೆ. ಯಾವಾಗಲೂ ಸರಿಯಾಗಿಯೇ ಇರಬೇಕೆಂದವರು ಸೋಲುತ್ತಾರೆ. ಯಾಕೆಂದರೆ ನಮ್ಮ ನಡೆ–ನುಡಿಗಳೆಲ್ಲ ಸದಾ ಸರಿಯಾಗಿರುವುದು ಅಸಂಭವ. ಮುಗ್ಗರಿಸದೇ ಜೀವನ ಸಾಗಿಸಲು ಸಾಧ್ಯವೇ ಇಲ್ಲ. ಆದ್ದರಿಂದ ವಿಧಿಯ ಲೀಲೆಯಿಂದಲೋ, ನಮ್ಮ ಅಜ್ಞಾನದಿಂದಲೋ ಆಕಸ್ಮಿಕವಾಗಿ ನಮ್ಮಿಂದ ತಪ್ಪುಗಳಾದರೆ ನಾವು ಹತಾಶರಾಗಬೇಕಿಲ್ಲ. ಯಾವ ವಿಧಿ ನಮ್ಮಿಂದ ತಪ್ಪನ್ನು ಮಾಡಿಸಿದೆಯೋ ಅದೇ ವಿಧಿ ನಮ್ಮಿಂದ ಸರಿಯಾದದ್ದನ್ನೂ ಮಾಡಿಸುತ್ತದೆ. ತಪ್ಪಿನಿಂದ ಸರಿಯೆಡೆಗೆ ನಡೆಯುವುದೇ ಬೆಳವಣಿಗೆ.

ಬದುಕು ಸದಾ ನಮ್ಮ ಎಣಿಕೆಯಂತೆ ಸಾಗುವುದಿಲ್ಲ. ಅದರಲ್ಲಿ ವಿಧಿಯ ಕೈವಾಡವೂ ಇರುತ್ತದೆ. ಇಂತಹ ಸಮಯದಲ್ಲಿ ತಪ್ಪಾದರೆ ಯಾರು ಹೊಣೆ? ಇದನ್ನೇ ಕನಕದಾಸರು ಭಗವಂತನಲ್ಲಿ ಪ್ರಶ್ನಿಸಿದ್ದರು. "ನಿನ್ನ ಪ್ರೇರಣೆಯಂತೆ ನಡೆದು, ನುಡಿದ ಮೇಲೆ ನಿನ್ನಿಂದ ತಪ್ಪೋ ನನ್ನಿಂದ ತಪ್ಪೋ ಪರಮಾತ್ಮ!" ಎಂಬುದಾಗಿ. ತಿಮ್ಮ ಗುರು ಕೂಡ ಸರಿತಪ್ಪಿನ ಬಗ್ಗೆ ವಿವರಿಸಿದ್ದಾನೆ.–

ಅರಸೊಬ್ಬನಲ್ಲ; ಮೂವರು ಬಾಳನಾಳುವರು।
ನರ ಕರುಮ ದೈವಗಳು; ತೊಡಕದಕೆ ಸಾಜ॥
ಗುರಿಯಿಡದ, ಮೊದಲು ಕೊನೆಯಿರದ ದರಬಾರಿನಲಿ।
ಸರಿಯೇನೊ ತಪ್ಪೇನೊ? ಮಂಕುತಿಮ್ಮ॥

ನಮ್ಮ ಈ ಬಾಳನ್ನಾಳಲು, ಒಬ್ಬ ರಾಜನಲ್ಲ, ಮೂವರಿದ್ದಾರೆ. ಮನುಷ್ಯ,

ಅವನ ಕರ್ಮ ಮತ್ತು ದೈವ. ಆದುದರಿಂದ ಇವರುಗಳ ಆಳ್ವಿಕೆಗೆ ಅಡಚಣೆಯುಂಟಾಗುವುದು ಸಹಜ. ಯಾವುದೇ ಗುರಿಯಿರದ ಮತ್ತು ಮೊದಲು ಅಥವಾ ಕೊನೆ ಇರದ ಈ ಜಗಲ್ಲೀಲೆಯೆಂಬ ದರಬಾರಿನಲ್ಲಿ ಸರಿ ಯಾವುದು, ತಪ್ಪು ಯಾವುದು? ಎಲ್ಲಾ ಒಂದೇ ಎಂಬುದು ಅಭಿಪ್ರಾಯ.

ಕುಂತಿಯ ಸೇವೆಯಿಂದ ಸಂತುಷ್ಟರಾದ ದೂರ್ವಾಸಮುನಿ, ಆಕೆಗೆ ಪುತ್ರಸಂತಾನ ಪ್ರಾಪ್ತಿಯ ಮಂತ್ರಗಳನ್ನು ಉಪದೇಶಿಸುತ್ತಾರೆ. ಒಂದು ದಿನ ಬಾಲ್ಯಸಹಜ ಕುತೂಹಲದಿಂದ ಕುಂತಿಯ ಮಂತ್ರಶಕ್ತಿಯ ಪರೀಕ್ಷೆಗಾಗಿ ಸೂರ್ಯನನ್ನು ಧ್ಯಾನಿಸಿ ಮಂತ್ರವನ್ನು ಉಚ್ಚರಿಸುತ್ತಾಳೆ. ಸೂರ್ಯದೇವ ಅವಳ ಕರೆಗೆ ಓಗೊಟ್ಟು ಧರೆಗಿಳಿದೇಬಿಟ್ಟ! ಅವಳು ಬೇಡವೆಂದು ಕಾಡಿ ಬೇಡಿದರೂ ಬಿಡದೆ ತನ್ನ ತೇಜಸ್ಸನ್ನು ಆಕೆಯಲ್ಲಿ ನೆಟ್ಟು ತೆರಳಿದ. ಅದರ ಫಲವಾಗಿ ಕರ್ಣ ಜನಿಸಿದ. ಲೋಕನಿಂದಗೆ ಹೆದರಿದ ಕುಂತಿ ಶಿಶುವನ್ನು ಗಂಗಾನದಿಯಲ್ಲಿ ತೇಲಿಬಿಟ್ಟಳು. ಕ್ಷತ್ರಿಯಕುಮಾರನಾದ ಕರ್ಣ ತಾಯಿಯ ಪ್ರೀತಿ ದೊರೆಯದೆ ಸಂಸ್ಕಾರ, ವಿದ್ಯೆ, ಪದವಿ ದೊರೆಯದೆ ದುರ್ದೈವಿಯಾಗಿ, ಸೂತಪುತ್ರನಾಗಿ ಬೆಳೆದ ದುರಂತ ಕಥೆ ಅದು. ಆದರೆ ಇಲ್ಲಿ ತಪ್ಪಿತಸ್ಥರು ಯಾರು? ಅರಿಯದ ಹುಡುಗಿ ಕುಂತಿಯೆ? ಮುಗ್ಧಬಾಲೆಗೆ ದಿವ್ಯಮಂತ್ರವನ್ನು ಉಪದೇಶಿಸಿದ ದೂರ್ವಾಸಮುನಿಯೇ? ಏನೋ ಅರಿಯದ ಚಿಕ್ಕ ಹುಡುಗಿ ಕುಂತಿ ಮಂತ್ರಮುಖೇನ ಆಹ್ವಾನಿಸಿದಳು ಎಂಬ ಒಂದೇ ಕಾರಣಕ್ಕೆ, ಅನಾಥ ಶಿಶುವಿನ ಜನನಕ್ಕೆ ಕಾರಣನಾದ ಸೂರ್ಯದೇವನೇ? – ಎಂಬಿತ್ಯಾದಿ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಅಥವಾ ಇಲ್ಲಿ ವಿಧಿಯೇ ತನ್ನ ಕೈಚಳಕವನ್ನು ತೋರಿತೆ?

ನಮ್ಮಿಂದ ತಪ್ಪಾಗುವುದು ಬೇರೆ. ನಾವು ತಪ್ಪು ಮಾಡುವುದು ಬೇರೆ; ತಪ್ಪು 'ಆಗು'ವುದಕ್ಕೂ, 'ಮಾಡುವುದಕ್ಕೂ ವ್ಯತ್ಯಾಸವೇನು? ನಮಗೆ ಗೊತ್ತಿಲ್ಲದೆಯೆ ಅದು 'ಆಗು'ತ್ತದೆ. ಗೊತ್ತಿದ್ದೂ ಗೊತ್ತಿದ್ದೂ ನಾವು ಇದನ್ನು 'ಮಾಡು'ತ್ತೇವೆ. ತಿಳಿದೂ ಮಾಡುವ ಅಪರಾಧವು ತಿಳಿಯದೇ ಆಗಿ ಹೋದ ತಪ್ಪಿಗಿಂತ ಘೋರ.

'ನ ಕಶ್ಚಿನ್ನಾಪರಾಧ್ಯತಿ?'

ತಪ್ಪು ಆದರೆ ಅದು ಅಂಥ ತಪ್ಪಲ್ಲ. ಕೈಲಾಸಂ ನಾಟಕದಲ್ಲಿ ಒಂದು ಕಡೆ ಬರುವ ಹಾಗೆ– 'ತಪ್ಪು ಯಾರಲಿಲ್ಲ? ನಿಮ್ಮಲ್ಲೂ ಇದೆ, ನಮ್ಮಲ್ಲೂ ಇದೆ. ತಪ್ಪೇ ಮಾಡದವನೆಂದರೆ ಪರಮಾತ್ಮ ಒಬ್ಬನೇ.'

ಅಶೋಕವನದಲ್ಲಿದ್ದ ಸೀತಾದೇವಿಯ ಬಳಿ ಆಂಜನೇಯ 'ತಾಯಿ, ನಿನಗೆ ಇದುವರೆಗೆ ಕಾಟಕೊಟ್ಟ ಈ ರಾಕ್ಷಸಸ್ತ್ರೀಯರಿಗೆ ತಕ್ಕ ಶಿಕ್ಷೆ ಮಾಡುತ್ತೇನೆ. ನನಗೆ

ಅನುಮತಿ ಕೊಡು' ಎಂದು ಕೇಳಿದಾಗ, ಸೀತೆ ಒಂದೇ ಮಾತು ಹೇಳಿದಳು: 'ನ ಕಶ್ಚಿನ್ನಾಪರಾಧ್ಯತಿ'–'ಯಾರೂ ತಪ್ಪೇ ಮಾಡುವುದಿಲ್ಲವೇ?–ಎಂದು ಅವನನ್ನು ತಡೆದಳು.

ಯೇಸುವಿನ ಕಾಲದಲ್ಲಿ ಆ ಕಾಲದ ಶಾಸ್ತ್ರಿಗಳು ತಪ್ಪು ಮಾಡಿದ ಒಬ್ಬ ಹೆಂಗಸನ್ನು ಎಳೆದುತಂದು ಕಲ್ಲುಹೊಡೆದು ಅವಳನ್ನು ಕೊಲ್ಲಬೇಕೆಂದಾಗ– "ನಿಮ್ಮಲ್ಲಿ ಎಂದೂ ಯಾವ ತಪ್ಪೂ ಮಾಡದವರು ಮೊದಲು ಕಲ್ಲು ಎಸೆಯಿರಿ' ಎಂದ ಯೇಸು. ಬಂದಿದ್ದವರೆಲ್ಲ ತಲೆತಗ್ಗಿಸಿ ಹೊರಟುಹೋದರು. 'ಹೋಗು ಹೆಣ್ಣೆ, ಇನ್ನೊಮ್ಮೆ ಇಂಥ ತಪ್ಪು ಮಾಡದಿರು'–ಇಷ್ಟೆ ಸ್ವಾಮಿ ಅವಳಿಗೆ ವಿಧಿಸಿದ ಶಿಕ್ಷೆ.

ಈ ದೃಷ್ಟಿಯಲ್ಲಿಯೇ ಜಿ.ಪಿ. ರಾಜರತ್ನಂ ಅವರು ಹೇಳಿದರು: "ತಪ್ಪು ಆಗುವುದು ಅಷ್ಟು ತಪ್ಪಲ್ಲ. ತಪ್ಪು ಮಾಡುವುದು ತುಂಬ ತಪ್ಪು. ತಪ್ಪು ಉಂಟು, ತಪ್ಪಗಾರರೂ ಉಂಟು, 'ತಪ್ಪಿತಸ್ಥರು' ಇಲ್ಲ. ತಪ್ಪೇ ತಪ್ಪಲ್ಲ; ತಪ್ಪನ್ನು ತಿಳಿಯದಿರುವುದು ನಿಜವಾದ ತಪ್ಪು; ತಿಳಿದ ಮೇಲೂ ಅದನ್ನು ತಿದ್ದಿಕೊಳ್ಳದಿರುವುದು ಮಹಾ ತಪ್ಪು.

ಸಾಧನೆಗೆ ಮೆಟ್ಟಲು

ತಪ್ಪು ಮಾಡದೇ ಇರುವುದು ಬಹಳ ಕಠಿಣ. ಆದ್ದರಿಂದ ತಪ್ಪಾದುದನ್ನು ಸರಿಮಾಡಿಕೊಳ್ಳುವುದು ಮನುಷ್ಯನ ದೊಡ್ಡ ಗುಣ. 'Mistakes are the portals to discoveries' ಎಂಬುದಾಗಿ ಹೇಳದ್ದಾನೆ. ನಮ್ಮ ಸಾಧನೆಗೆ ತಪ್ಪುಗಳು ಕೂಡ ಒಂದು ಮೆಟ್ಟಲಾಗಬಹುದು. "ನಿಮ್ಮ ಬದುಕಿನಲ್ಲಿ ಘಟಿಸುವ ಒಂದು ಸಣ್ಣ ತಪ್ಪು ನಿಮ್ಮಲ್ಲಿ ಪರಿವರ್ತನೆಗೆ ದಾರಿ ತೋರುತ್ತದೆ"– ಎಂಬುದಾಗಿ ಅಮೇರಿಕದ ಪ್ರಸಿದ್ಧ ಉದ್ಯಮಿಯಾಗಿದ್ದ ಹೆನ್ರಿಫೋರ್ಡ್ ಹೇಳಿದ್ದಾನೆ. ನಾವಾರೂ ತಪ್ಪುಗಳಿಂದ ಮುಕ್ತವಾಗಿಲ್ಲ. ಅಂಥ ಗಾಂಧೀಯವರೇ ಚಿಕ್ಕಂದಿನಲ್ಲಿ ತಪ್ಪು ಮಾಡಿಲ್ಲವೇ? ಆದರೆ ಅವರು ಅದನ್ನು ತಿದ್ದಿಕೊಂಡು ಮುನ್ನಡೆದುದರಿಂದಲೇ ದೊಡ್ಡವರಾದದ್ದು. ಗಾಂಧಿಯವರು ಮಾನವ ಸಹಜ ಎಲ್ಲಾ ತಪ್ಪುಗಳನ್ನೂ ಮಾಡಿದ್ದರೆ. ಆದರೆ ತನ್ನಿಂದ ತಪ್ಪು ನಡೆದಿದೆ ಎಂದು ಅವರಿಗೆ ಗೊತ್ತಾದಾಗ ಎಚ್ಚೆತ್ತುಕೊಂಡರು. ನಡೆದ ತಪ್ಪನ್ನು ತಿದ್ದಕೊಂಡರು.

ಕೆಲವು ವರ್ಷಗಳ ಕೆಳಗೆ ಆತ ದೂರದರ್ಶನವನ್ನೇ ನೋಡಿರಲಿಲ್ಲ. ನೋಡಲು ಅಚಿತ ಸ್ಫುರದ್ರೂಪಿಯೂ ಆಗಿರಲಿಲ್ಲ. ಕ್ರಿಕೆಟ್ ಆಟಗಾರನಂತೂ ಅಲ್ಲವೇ ಅಲ್ಲ. ರೂಪದರ್ಶಿಯಾಗುವ ಯಾವ ಅರ್ಹತೆಯೂ ಅವನಲ್ಲಿರಲಿಲ್ಲ.

ಒಮ್ಮೆ ದೂರದರ್ಶನದ ಛಾನೆಲ್ ಒಂದರಲ್ಲಿ ಮೊದಲ ಕಾರ್ಯಕ್ರಮ ನೀಡಿದಾಗ 'ನಿನ್ನ ಮುಖ ಟಿವಿಗೆ ಸೂಕ್ತವಾಗಿಲ್ಲ. ನೀನು ರೇಡಿಯೋ ಕಾರ್ಯಕ್ರಮಕ್ಕೆ ಮಾತ್ರ ಸೂಕ್ತ' ಎಂಬ ಮಾತು ನಿರ್ಮಾಪಕರಿಂದ ಬಂದಿತ್ತು. ಮತ್ತೊಮ್ಮೆ ಟಿವಿಯಲ್ಲಿ ನಿರೂಪಕನಾಗಿ ಕಾರ್ಯನಿರ್ವಹಿಸಿದಾಗ ತಪ್ಪುತಪ್ಪಾಗಿ ನಿರ್ವಹಿಸಿ ಟೀಕೆಗೆ ಒಳಗಾಗಿದ್ದೂ ಇದೆ. ಆಗ ದೂರದರ್ಶನವನ್ನು ಬಿಟ್ಟರೆ ಯಾವ ಛಾನಲ್‌ಗಳೂ ಇರಲಿಲ್ಲ. ಪ್ರತಿಹಂತದಲ್ಲಿಯೂ ತಪ್ಪು ಮಾಡುತ್ತಿದ್ದ ಈ ವ್ಯಕ್ತಿಯ ಮನಸ್ಸಿನಲ್ಲಿ ಈ ಬಗ್ಗೆ ಕೀಳರಿಮೆ ಬೆಳೆದರೂ ಸಹ ಹಿಮ್ಮೆಟ್ಟಲಿಲ್ಲ. ಪದೇಪದೇ ತಪ್ಪು ಮಾಡುತ್ತಲೇ ತನ್ನನ್ನು ತಿದ್ದಿಕೊಳ್ಳುವ ನಿರ್ಧಾರ ಮಾಡಿದ. ಅವನ ತಪ್ಪುಗಳೇ ಅವನ ಸವಾಲಾಗಿದ್ದವು. ಒಮ್ಮೆ ಮಾಡಿದ ತಪ್ಪನ್ನು ಮತ್ತೊಮ್ಮೆ ಮಾಡಲು ಎಂದೂ ಮುಂದಾಗಲಿಲ್ಲ. ಒಮ್ಮೆ ಒಂದು ಪ್ರತಿಷ್ಠಿತ ಕ್ರೀಡಾಕೂಟದ ಕಾರ್ಯಕ್ರಮ ನಿರೂಪಣೆ ಮಾಡುವಾಗ ನಿರ್ದೇಶಕರು ಹೇಳಿದ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳದೇ ಹಠಾತ್ತಾಗಿ ನಿಲ್ಲಿಸಿ ಗೊಂದಲವನ್ನುಂಟುಮಾಡಿದ್ದ. ಏಕೆಂದರೆ ಅವನಿಗೆ ಈಯರ್ ಫೋನ್ ಉಪಯೋಗಿಸುವ ಕ್ರಮವೇ ಗೊತ್ತಿರಲಿಲ್ಲ. ಅವನ ಆ ತಪ್ಪು ಎಷ್ಟು ಘೋರವಾಗಿತ್ತೇಂದರೆ ದೂರದರ್ಶನವನ್ನು ನೋಡುತ್ತಿದ್ದ ಲಕ್ಷಾಂತರ ಮಂದಿಯ ಕಣ್ಣಿಗೆ ಅವನು ಅಪರಾಧಿಯಂತೆ ಕಂಡುಬಂದಿದ್ದು ಆಗ ಆತ ಇನ್ನು ತನಗೆ ಭವಿಷ್ಯವಿಲ್ಲ ಎಂದರಿತು ಕಣ್ಣೀರು ಸುರಿಸಿದ್ದ ಇನ್ನೆಂದೂ ಇಂತಹ ತಪ್ಪು ತನ್ನಿಂದ ಆಗುವುದಿಲ್ಲವೆಂದು ಭರವಸೆ ನೀಡಿದ್ದ. ಅನಂತರದ ದಿನಗಳಲ್ಲಿ ತನ್ನ ತಪ್ಪುಗಳನ್ನು ಎಚ್ಚರಿಕೆಯಿಂದ ತಿದ್ದಳ್ಳುತ್ತಾ ಮತ್ತೊಮ್ಮೆ ಇಂತಹ ತಪ್ಪುಗಳಾಗದಂತೆ ನಡೆದುಕೊಂಡು ಇಂದು ಟಿವಿಯ ಯಾವುದೇ ಛಾನಲ್‌ನಲ್ಲಿಯೂ ಲೀಲಾಜಾಲವಾಗಿ ಮಾತನಾಡುತ್ತಾ, ಜನಪ್ರೀಯ ಕ್ರಿಕೆಟ್ ವಿಶ್ಲೇಷಕನಾಗಿ, ಹೆಸರಾಂತ ನಿರೂಪಕನಾಗಿ ಹೆಸರು ಗಳಿಸಿರುವ ಆ ವ್ಯಕ್ತಿ ಹರ್ಷ ಭೋಗ್ಲೆ. ದೃಶ್ಯಮಾಧ್ಯಮದಲ್ಲಿ 'ತಪ್ಪುಗಳನ್ನು ಮಾಡಿ, ಆದರೆ ಅದರ ಪುನರಾವರ್ತನೆ ಬೇಡ' ಎಂಬ ಮಾತು ಮಂತ್ರದಂತಿದೆ.

"ತಪ್ಪುಗಳನ್ನು ಮಾಡುತ್ತಾ ಸಾಗಿಸಿದ ಜೀವನವು ಏನನ್ನೂ ಮಾಡದೆ ಸವೆಸಿದ ಜೀನಕ್ಕಿಂತ ಹೆಚ್ಚು ಗೌರವಾರ್ಹವೂ, ಉಪಯುಕ್ತವೂ ಆಗಿದೆ" ಎಂಬುದಾಗಿ ಜಾರ್ಜ್ ಬರ್ನಾರ್ಡ್ ಷಾ ಹೇಳಿದ್ದಾರೆ.

ಜಪಾನೀಯರಲ್ಲಿ ಒಂದು ಗುಣವಿದೆ. ಅವರು ತಪ್ಪುಗಳನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ಯಾವುದಾದರೂ ಪ್ರಮಾದವಾದರೆ, ಆಕಸ್ಮಿಕವಾಗಿ ತಪ್ಪಾದರೆ ಅದು ಅವರ ಗಮನಕ್ಕೆ ಬಂದರೆ ಅದನ್ನು ಒಂದು ವಿಧಿಯೆಂದೇ ಬಗೆಯುತ್ತಾರೆ.

ಏಕೆ ಗೊತ್ತೇ? ಅವರ ಪ್ರಕಾರ, ‘ ನಮ್ಮ ಕೆಲಸವು ಇನ್ನಷ್ಟು ಉತ್ತಮಗೊಳಿಸಲು ತಪ್ಪುಗಳೇ ಕೀಲಿಕೈ ಇದ್ದಂತೆ’ ಎಂಬುದು ಅವರ ಭಾವನೆ.

ಅದೊಂದು ಉತ್ಪಾದನಾ ಸಂಸ್ಥೆ. ನೂರಾರು ಕಾರ್ಮಿಕರು ಮೂರು ಪಾಳಿಗಳಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿ ಶನಿವಾರ ಕೆಲಸಗಾರರ ವೇತನವನ್ನು ವ್ಯವಸ್ಥಾಪಕರು ಲಕೋಟೆಯಲ್ಲಿ ಹಾಕಿ ಕೊಡುತ್ತಿದ್ದರು. ಕಾರ್ಮಿಕರು ಸ್ಥಳದಲ್ಲಿಯೇ ನೋಟುಗಳನ್ನು ಎಣಿಸಿ ಹೆಚ್ಚು-ಕಡಮೆ ಇದ್ದರೆ ದೂರು ಕೊಡಲು ಅವಕಾಶವಿತ್ತು.

ಹೀಗೆ ಮಾಡುವಾಗ ಕಾರ್ಮಿಕರು ಎಷ್ಟು ಪ್ರಾಮಾಣಿಕರು ಎಂಬುದನ್ನು ಪರೀಕ್ಷಿಸಿ ನೋಡಲು ವ್ಯವಸ್ಥಾಪಕರು ಬಯಸಿದರು ಮತ್ತು ಅದಕ್ಕೊಂದು ಉಪಾಯ ಹೂಡಿದರು. ಇದರ ಪರಿಣಾಮವಾಗಿ ಒಬ್ಬ ಕಾರ್ಮಿಕನಿಗೆ ನೀಡಲಾದ ಲಕೋಟೆಯಲ್ಲಿ ಅವನಿಗೆ ಸಲ್ಲಬೇಕಾದ ಮೊತ್ತಕ್ಕಿಂತ ಇಪ್ಪತ್ತು ರೂಪಾಯಿ ಕಮ್ಮಿಯಿತ್ತು. ಕೂಡಲೇ ಅವನು ದೂರು ಸಲ್ಲಿಸಿದ.

“ನಿನಗೆ ಹಿಂದಿನ ಎರಡು ವಾರ ಹತ್ತುಹತ್ತು ರೂಪಾಯಿ ಹೆಚ್ಚಿಗೆ ಕೊಟ್ಟಿದ್ದೆ. ಹಾಗಾಗಿ ಈ ಸಲ ಇಪ್ಪತ್ತು ಕಡಮೆ ಮಾಡಿದೆ. ಎರಡು ಸಲ ನೋಟು ಅಧಿಕ ಬಂದಾಗ ನೀನು ಯಾಕೆ ಹೇಳಲಿಲ್ಲ?” ಮ್ಯಾನೇಜರ್ ದಬಾಯಿಸಿದ.

“ಸ್ವಾಮೀ; ಒಂದು ಸಲ ತಪ್ಪು ಮಾಡಿದಾಗ ಅದನ್ನು ಅಲಕ್ಷಿಸಬಹುದು. ಎರಡು ಸಲ ತಪ್ಪು ಮಾಡಿದಾಗಲೂ ಕ್ಷಮಿಸಬಹುದು. ಆದರೆ ಪ್ರತಿ ಸಲ ತಪ್ಪು ಮಾಡಿದಾಗಲೂ ಸುಮ್ಮನಿರುವುದು ಹೇಗೆ?” ಇದು ಕಾರ್ಮಿಕನ ಮರುಪ್ರಶ್ನೆ!

ಗುಣದ್ವಂದ್ವ

‘ನಾವು ಮಾಡುವ ಒಳ್ಳೆಯ ಕೆಲಸಕ್ಕೆ ಭಗವಂತ ತಕ್ಷಣ ಯಾಕೆ ಫಲ ಕೊಡುವುದಿಲ್ಲ?’ ಎಂಬುದಾಗಿ ಯಾರೋ ಒಬ್ಬರು ಮಹಾತ್ಮರೊಡನೆ ಕೇಳಿದರಂತೆ. ಅದಕ್ಕವರು ‘ನಾವು ಮಾಡಿದ ತಪ್ಪುಗಳಿಗೆ ಕೂಡ ಭಗವಂತ ತಕ್ಷಣ ಶಿಕ್ಷೆ ಕೊಡುವುದಿಲ್ಲ’ ಎಂದರಂತೆ. ‘ಟು ಎರ್ರ್ ಈಸ್ ಹ್ಯೂಮನ್. ಬಟ್ ಟು ಫರ್‌ಗಿವ್ ಈಸ್ ಡಿವೈನ್’ ಎಂಬುದು ಇಂಗ್ಲಿಷಿನ ಚಿರಪರಿಚಿತ ಮಾತು. ತಪ್ಪು ಮಾಡುವುದು ಮನುಷ್ಯ ಗುಣ. ಆದರೆ ಕ್ಷಮಿಸುವುದು ದೈವೀಗುಣ.

ಹಿಮಾಲಯದಲ್ಲಿದ್ದ ಗುರುಕುಲದಲ್ಲೊಬ್ಬ ಗುರುಗಳಿದ್ದರು. ಅವರಿಗೆ ಹತ್ತಾರು ಮಂದಿ ಶಿಷ್ಯರಿದ್ದರು. ಗುರುಗಳು ಬಹಳ ದೊಡ್ಡ ವಿದ್ವಾಂಸರು. ಆದರೆ ಸರಳ ಸ್ವಭಾವದವರು, ಪ್ರಾಮಾಣಿಕರು.

ಒಮ್ಮೆ ಅವರು ದೇವರನ್ನು ಕುರಿತು ಪ್ರವಚನ ಮಾಡುವಾಗ, ದೇವರು ನಿರಾಕಾರನಾದರೂ ಅವರವರ ಭಾವಕ್ಕೆ ತಕ್ಕಂತೆ ಕಾಣಿಸಿಕೊಳ್ಳುತ್ತಾನೆ ಎಂದು

ವಿವರಿಸಿದರು. ಮರುದಿನ ಭೋಳೇ ಸ್ವಭಾವದ ಶಿಷ್ಯನೊಬ್ಬ "ಗುರುಗಳೇ! ನಿನ್ನೆ ರಾತ್ರಿ ನಾನು ದೇವರನ್ನು ಕುರಿತು ಚಿಂತಿಸುತ್ತ ಕುಳಿತಿದ್ದೆ. ಇದ್ದಕ್ಕಿದ್ದಂತೆ ಪ್ರಜ್ವಲವಾದ ಬೆಳಕನ್ನು ಕಂಡೆ. ಅದರಲ್ಲಿ ದೇವರನ್ನು ಕಂಡೆ. ಬಹಳ ಹೊತ್ತು ಆತನೊಂದಿಗೆ ಮಾತನಾಡಿದೆ. ನನ್ನ ಪ್ರಶ್ನೆಗಳಿಗೆಲ್ಲ ಆತ ಉತ್ತರಿಸಿದ!" ಎಂದ ತಕ್ಷಣ ಉಳಿದ ಶಿಷ್ಯರುಗಳೆಲ್ಲ ಗೊಳ್ಳೆಂದು ನಕ್ಕರು. ಆದರೆ ಗುರುಗಳು ನಗಲಿಲ್ಲ. "ಇದರಲ್ಲಿ ನಗುವಂತಹುದ್ದೇನೂ ಇಲ್ಲ. ಅವರವರ ನಂಬಿಕೆ ಭಾವನೆಗಳಿಗೆ ಅನುಗುಣವಾಗಿ ಎಲ್ಲವೂ ನಡೆಯುತ್ತದೆ. ಆಶ್ಚರ್ಯವೇನೂ ಇಲ್ಲ" ಎಂದರು.

ಅನಂತರ ಆ ಶಿಷ್ಯ ಅನೇಕ ಬಾರಿ ದೇವರನ್ನು ಕಂಡೆನೆಂದು ಹೇಳುವುದು ಉಳಿದ ಶಿಷ್ಯರೆಲ್ಲ ನಗುವುದೂ, ಗುರುಗಳು 'ಒಳ್ಳೆಯದು' ಎಂದು ಹೇಳುವುದೂ ನಡೆಯುತ್ತಿತ್ತು. ಆದರೆ ಕೊನೆಗೊಂದು ದಿನ ಗುರುಗಳಿಗೂ ಸುಮ್ಮನಿರಲಾಗಲಿಲ್ಲ. ಅವರು "ನೀನು ದೇವರನ್ನು ಕಾಣುವುದೂ, ನಿನ್ನ ಪ್ರಶ್ನೆಗಳಿಗೆ ಆತ ಉತ್ತರಿಸುವುದೂ ನಿಜವಾದರೆ, ಇಂದು ದೇವರಿಗೆ ನೀನೊಂದು ಪ್ರಶ್ನೆಯನ್ನು ಕೇಳು. ನಾನು ಗುರುವಾಗುವುದಕ್ಕೆ ಮುಂಚೆ ಸಾಮಾನ್ಯ ಮಾನವವಾಗಿದ್ದೆ. ಅನೇಕ ತಪ್ಪುಗಳನ್ನು ಮಾಡಿದ್ದೆ. ಅವು ನನಗೊಬ್ಬನಿಗೆ ಮಾತ್ರ ಗೊತ್ತು ಸರ್ವಜ್ಞನಾದ ದೇವರಿಗೆ ಅವು ಗೊತ್ತಿರಬಹುದು. ನೀನು ಆ ತಪ್ಪುಗಳೇನೆಂದು ದೇವರಿಂದ ತಿಳಿದುಕೊಂಡು ಬಂದು ನಾಳೆ ಹೇಳಿದರೆ ನಾವೆಲ್ಲ ನಿನ್ನ ಮಾತುಗಳನ್ನು ನಂಬುತ್ತೇವೆ; ಒಪ್ಪಿಗೆಯೇ?" ಎಂದು ಕೇಳಿದರು. ಶಿಷ್ಯ ಒಪ್ಪಿದ.

ಮರುದಿನ ಉಳಿದ ಶಿಷ್ಯರಿಗೂ ಕುತೂಹಲ, ಗುರುಗಳಿಗೂ ಕುತೂಹಲ. ಆದರೆ ಆ ಶಿಷ್ಯ ಬಂದು 'ಎಂದಿನಂತೆ ನಿನ್ನೆಯೂ ದೇವರನ್ನು ಕಂಡೆ. ನಿಮ್ಮ ಪ್ರಶ್ನೆಯನ್ನು ಕೇಳಿದೆ. ಆದರೆ ದೇವರು ಸರಿಯಾದ ಉತ್ತರವನ್ನು ಕೊಡಲಿಲ್ಲ' ಎಂದಾಗ ಉಳಿದ ಶಿಷ್ಯರೆಲ್ಲ 'ಈತ ದೇವರನ್ನು ಕಂಡಿಲ್ಲ. ಮಾತನಾಡಿದ್ದಿಲ್ಲ. ಪ್ರಶ್ನೆಗಳಿಗೆ ದೇವರು ಉತ್ತರಿಸಿದ್ದಿಲ್ಲ. ಎಲ್ಲ ಬರಿಯ ಬೊಗಳೆ' ಎಂದೂ ಕೂಗಾಡಿದರು. ಆದರೆ ಗುರುಗಳು 'ದೇವರು ಏನು ಹೇಳಿದರೆಂಬುದನ್ನಾದರೂ ಹೇಳು' ಎಂದರು. ಆಗ ಅವನು "ದೇವರು ಯಾರ ತಪ್ಪುಗಳನ್ನೂ ಲೆಕ್ಕಹಾಕಿಟ್ಟುಕೊಳ್ಳುವುದಿಲ್ಲ. 'ಅವನ್ನು ಆಗಿಂದಾಗಲೇ ಕ್ಷಮಿಸಿಬಿಡುತ್ತೇನೆ. ಮರೆತುಬಿಡುತ್ತೇನೆ. ನಿನ್ನ ಗುರುಗಳು ಮಾಡಿರಬಹುದಾದ ತಪ್ಪುಗಳನ್ನು ನಾನು ಎಂದೋ ಕ್ಷಮಿಸಿದ್ದೇನೆ, ಮರೆತಿದ್ದೇನೆ ಎಂದು ನಿನ್ನ ಗುರುಗಳಿಗೆ ಹೇಳು' ಎಂದ– ಎಂದಾಗ ಗುರುಗಳು ತಮ್ಮ ಪೀಠದಿಂದಿಳಿದು ಬಂದು ಆ ಶಿಷ್ಯನನ್ನು ತಬ್ಬಿಕೊಂಡು "ನಿನ್ನ ಮಾತುಗಳು ಸಂಪೂರ್ಣವಾಗಿ ಸತ್ಯವೆಂದು ನನಗೆ

ಗೊತ್ತಾಯಿತು. ದೇವರ ದರ್ಶನ ಪಡೆದ ನೀನು ಧನ್ಯ" ಎಂದರು. ಆಶ್ಚರ್ಯದಿಂದ ನೋಡುತ್ತಿದ್ದ ಉಳಿದ ಶಿಷ್ಯರಿಗೆ "ಇತರರ ತಪ್ಪುಗಳನ್ನು ಲೆಕ್ಕಹಾಕಿಟ್ಟುಕೊಂಡು ಅದಕ್ಕೆ ಶಿಕ್ಷೆಯನ್ನು ಕೊಡುವವರು ದಾನವರು. ಇತರರ ತಪ್ಪುಗಳನ್ನು ಮರೆಯುವವರು ಮಾನವರು. ಆದರೆ ಇತರರ ತಪ್ಪುಗಳನ್ನು ಕ್ಷಮಿಸಿ, ಮರೆತುಬಿಡುವವರು ದೇವರು. ಈತ ದೇವರನ್ನು ಕಂಡಿದ್ದಾನೆಂಬುದನ್ನು ನಂಬಲು ಆ ಉತ್ತರವೊಂದೇ ಸಾಕು" ಎಂದರಂತೆ!

ನಾವು ಹಲವಾರು ತಪ್ಪುಗಳನ್ನು ಮಾಡಿದರೂ, ಅದನ್ನು ತಿದ್ದಿಕೊಂಡು ಉನ್ನತಿಯತ್ತ ಸಾಗುತ್ತಿದ್ದರೆ ಭಗವಂತ ಆ ತಪ್ಪುಗಳನ್ನೆಲ್ಲ ಕ್ಷಮಿಸುತ್ತಾನೆ. ಆದರೆ ನಿರಂತರವಾಗಿ ತಪ್ಪುಗಳನ್ನು ಮಾಡುತ್ತಾ ಇದ್ದರೆ ವಿಧಿ ಆತನನ್ನು ಶಿಕ್ಷಿಸುತ್ತದೆ. ಶಿಶುಪಾಲ ೯೯ ಬಾರಿ ತಪ್ಪು ಮಾಡಿದಾಗಲೂ ಭಗವಾನ್ ಶ್ರೀಕೃಷ್ಣ ಕ್ಷಮಿಸಿದ. ಆದರೆ ನೂರನೇ ತಪ್ಪಿಗೆ ಆತನನ್ನು ಶಿಕ್ಷಿಸಿದ. ನಾವು ಕೂಡ ನಮ್ಮ ಜೀವನದಲ್ಲಿ ಶಿಶುಪಾಲನಂತೆ ನಿರಂತರ ತಪ್ಪು ಮಾಡದಿರೋಣ. ಎಡವಿ ಬಿದ್ದಾಗ ಎಚ್ಚೆತ್ತುಕೊಳ್ಳೋಣ. ಪುನಃ ಬೀಳದ ಹಾಗೆ ಜಾಗ್ರತೆವಹಿಸೋಣ. ಬಿದ್ದಾಗ ಪುನಃ ಎದ್ದು ನಡೆಯೋಣ. ಬಿದ್ದಲ್ಲೆ ಇರುವುದು ಜಾಣತನವಲ್ಲ. ಇದು ನಮ್ಮ ವ್ಯಕ್ತಿತ್ವವನ್ನು ಕುಂಠಿತಗೊಳಿಸುತ್ತದೆ.

ಆತ್ಮಸಾಕ್ಷಿಯೇ ಮಾನದಂಡ

ಈ ಜಗತ್ತಿನಲ್ಲಿ ಸರಿ ಯಾವುದು, ತಪ್ಪು ಯಾವುದು ಎಂಬುದನ್ನು ಖಚಿತವಾಗಿ ಹೇಳುವುದು ಕಷ್ಟ. ಸರಿ ತಪ್ಪನ್ನು ನಿರ್ಣಯಿಸುವುದಕ್ಕೆ ಅತ್ಯುತ್ತಮ ಮಾನದಂಡವೆಂದರೆ ನಮ್ಮ ಆತ್ಮಸಾಕ್ಷಿಯೊಂದೇ. ಆತ್ಮಸಾಕ್ಷಿಗೆ ಅನುಗುಣವಾದ ನಡೆ ಸರಿ. ಆತ್ಮಸಾಕ್ಷಿಗೆ ವಿರುದ್ಧವಾದ ನಡೆ ತಪ್ಪು. ಶ್ರೀರಾಮಚಂದ್ರ ಕಾಲಪುರುಷನೊಡನೆ ರಹಸ್ಯ ಮಾತುಕತೆ ನಡೆಸುತ್ತಿದ್ದಾಗ ಯಾರನ್ನೂ ಒಳಗೆ ಬಿಡಬೇಡ ಎಂಬುದಾಗಿ ಲಕ್ಷ್ಮಣನಿಗೆ ರಾಜಾಜ್ಞೆ ಇತ್ತು. ಆ ಸಂದರ್ಭದಲ್ಲಿ ದೂರ್ವಾಸಮುನಿ ಬಂದು ನನಗೆ ಈಗಲೇ ಒಳಗೆ ಬಿಡು, ಇಲ್ಲದಿದ್ದರೆ ಇಡೀ ರಘುವಂಶಕ್ಕೇ ಶಾಪ ಕೊಡುತ್ತೇನೆಂದಾಗ ಲಕ್ಷ್ಮಣ ಒಳಗೆ ಬಿಡುತ್ತಾನೆ. ಲಕ್ಷ್ಮಣನ ನಡೆ ರಾಮನ ದೃಷ್ಟಿಯಲ್ಲೂ ಲೋಕದ ದೃಷ್ಟಿಯಲ್ಲೂ ಲೋಕದ ತಪ್ಪಾಗಿದ್ದರೂ ಆತ ತನ್ನ ಆತ್ಮಸಾಕ್ಷಿಯಂತೆ ಸರಿಯಾದ ನಿರ್ಣಯವನ್ನೆ ತೆಗೆದುಕೊಂಡ. ತಾನಳಿದರೂ ಪರವಾಗಿಲ್ಲ, ಆದರೆ ರಘುವಂಶ ಉಳಿಯಬೇಕು ಎಂಬ ಆತನ ಅಂತರಾತ್ಮದ ಕೂಗು ಸರಿಯಾದ ನಡೆಯನ್ನೆ ನಡೆಸಿತು.

ನಾವು ಮಾಡಿದ ತಪ್ಪು ನಮ್ಮ ಅಂತರಾತ್ಮಕ್ಕೆ ತಪ್ಪು ಎಂಬುದಾಗಿ ತಿಳಿದ

ತಕ್ಷಣ ನಾವದನ್ನು ಒಪ್ಪಿಕೊಳ್ಳಬೇಕು. ಇನ್ನೊಬ್ಬರು ತಮ್ಮ ತಪ್ಪನ್ನು ಎತ್ತಿತೋರಿಸುವ ಮೊದಲೇ, ಅವರು ಅದನ್ನು ಎಲ್ಲೆಡೆ ಹರಡುವ ಮೊದಲೆ, ನಮ್ಮ ತಪ್ಪನ್ನು ನಾವೇ ಒಪ್ಪಿಕೊಂಡರೆ ಉತ್ತಮ. ನಮ್ಮ ತಪ್ಪನ್ನು ಒಪ್ಪಿಕೊಳ್ಳುವುದರಿಂದ ಅಸಮಾಧಾನದ ವಾತಾವರಣ ತಿಳಿಯಾಗುತ್ತದೆ. ನಮ್ಮ ತಪ್ಪನ್ನು ನಾವೇ ಒಪ್ಪಿಕೊಂಡರೆ ಇತರರು ನಮ್ಮ ಸಹಾಯಕ್ಕೆ ಬರುತ್ತಾರೆ."ಇಲ್ಲ, ಪರವಾಗಿಲ್ಲ, ಅಂಥದ್ದೇನು ಆಗಿಲ್ಲವಲ್ಲ" ಎಂದು ನಮ್ಮ ರಕ್ಷಣೆಗೆ ಬರುತ್ತಾರೆ. ನಮ್ಮಿಂದ ಬೇರೆಯವರಿಗೆ ತೊಂದರೆ ಆದ ತಕ್ಷಣ 'ಕ್ಷಮಿಸಿ' ಎಂದರೆ ಅವರು ಕ್ಷಮಿಸುತ್ತಾರೆ. ಒಂದು ವೇಳೆ ನಾವು ನಮ್ಮ ತಪ್ಪನ್ನು ಒಪ್ಪಿಕೊಳ್ಳದೆ ಇದಕ್ಕೆ ಇತರರನ್ನು ದೂರಿದರೆ ಸಮಾಜ ತಕ್ಷಣ ನಮ್ಮನ್ನು ದೂಷಿಸಲು ಪ್ರಾರಂಭಿಸುತ್ತದೆ.

ತಪ್ಪು-ಒಪ್ಪಿನ ರಾಮಾಯಣ

ಅದು ರಾಮ-ರಾವಣರ ಯುದ್ಧ ನಡೆಯಬೇಕಾದ ಸಂದರ್ಭ. ರಾವಣನಿಗೆ ಸಾಕಷ್ಟು ಜನ ಬುದ್ಧಿ ಹೇಳಿದ್ದರು. ಮತ್ತೊಬ್ಬರ ಪತ್ನಿಯನ್ನು ಎತ್ತಿಕೊಂಡು ಬಂದು ಬಂಧನದಲ್ಲಿಟ್ಟು ಮದುವೆಯಾಗಲು ಒತ್ತಾಯಿಸುತ್ತಿರುವುದು ಸರಿಯಿಲ್ಲವೆಂದು ಆತನ ಪತ್ನಿ ಮಂಡೋದರಿಯಿಂದ ಹಿಡಿದು ಆತನ ತಮ್ಮ ವಿಭೀಷಣನವರೆಗೆ ಎಲ್ಲರೂ ತಿಳಿಹೇಳಿದ್ದರು. ಆದರೆ ರಾವಣ ಯಾರ ಮಾತನ್ನೂ ಕಿವಿಗೆ ಹಾಕಿಕೊಳ್ಳಲಿಲ್ಲ. 'ಯುದ್ಧಕ್ಕೆ ಸಿದ್ಧ. ಆದರೆ ಸೀತಾದೇವಿಯನ್ನು ಬಿಟ್ಟುಕೊಡುವುದಿಲ್ಲ' ಎಂದು ಹಠ ಹಿಡಿದಿದ್ದ. ಬೇರೆ ದಾರಿ ಕಾಣದೆ ರಾವಣನ ತಮ್ಮ ವಿಭೀಷಣ ಅಣ್ಣನ ಪಕ್ಷವನ್ನು ತೊರೆದು ರಾಮನ ಬಳಿ ಬಂದ. 'ನಾನು ಅಧರ್ಮಿಯಾದ ರಾವಣನನ್ನು ತೊರೆದು ನಿನಗೆ ಶರಣಾಗಿ ಬಂದಿದ್ದೇನೆ' ಎಂದು ಹೇಳಿಕೊಂಡ. ಶರಣಾಗತನಾಗಿ ಬಂದ ವಿಭೀಷಣನಿಗೆ ಶ್ರೀರಾಮಚಂದ್ರ ಆಶ್ರಯ ಕೊಟ್ಟ, ಯುದ್ಧ ಮುಗಿದು ರಾವಣನ ಆಳ್ವಿಕೆ ಕೊನೆಗೊಂಡ ನಂತರ ವಿಭೀಷಣನನ್ನೇ ಲಂಕೆಯ ಚಕ್ರವರ್ತಿಯನ್ನಾಗಿ ಮಾಡುತ್ತೇನೆಂದು ಮಾತುಕೊಟ್ಟ. ಇದನ್ನು ಗಮನಿಸಿದ ಸುಗ್ರೀವ ರಾಮನ ಬಳಿಗೆ ಬಂದು, 'ರಾವಣನೇ ತಪ್ಪೊಪ್ಪಿಕೊಂಡು ತಮಗೆ ಶರಣಾದರೆ ಏನು ಮಾಡುತ್ತೀರಿ? ಆಗ ಲಂಕೆಯ ಚಕ್ರವರ್ತಿಯಾಗಿ ರಾವಣನನ್ನೇ ಮುಂದುವರಿಸಬೇಕಾಗುತ್ತದಲ್ಲವೇ? ಅದನ್ನು ತಪ್ಪಿಸಲು ಹೇಗೆ ಸಾಧ್ಯ? ಆಗ ರಾವಣನ ಗತಿಯೇನು, ವಿಭೀಷಣನ ಗತಿಯೇನು?' ಎಚಿದು ಪ್ರಶ್ನಿಸಿದ. ಅದಕ್ಕೆ ರಾಮ, 'ದಾನವರ ಸ್ವಭಾವವೇ ಹಾಗೆ. ಗೊತ್ತಿದ್ದು ತಪ್ಪು ಮಾಡುತ್ತಾರೆ. ಆದರೆ ತಪ್ಪನ್ನು ಒಪ್ಪಿಕೊಂಡು ಅದನ್ನು ತಿದ್ದಿಕೊಳ್ಳುವ ಕೆಲಸ ಮಾಡುವುದಿಲ್ಲ. ರವಣನೂ ಅಂತಹ ಸ್ವಭಾವದವನೇ. ಸಚಿದರ್ಭವಶಾತ್

ಹಾಗೇನಾದರೂ ರಾವಣ ತಪ್ಪೊಪ್ಪಿಕೊಂಡು ಬಂದು ಶರಣಾದರೆ ನಾನು ಖಂಡಿತ ಆತನಿಗೆ ಆಶ್ರಯ ಕೊಡುತ್ತೇನೆ. ಆದರೆ ವಿಭೀಷಣನನ್ನು ಸ್ಥಾನಪಲ್ಲಟಗೊಳಿಸುವುದಿಲ್ಲ. ಆತ ಲಂಕೆಯ ಚಕ್ರವರ್ತಿಯಾಗಿಯೇ ಉಳಿಯುತ್ತಾನೆ. ನಾನು ಅಯೋಧ್ಯೆಯ ಸಿಂಹಾಸನವನ್ನು ರಾವಣನಿಗೆ ಬಿಟ್ಟುಕೊಡುತ್ತೇನೆ. ಆಗ ವಿಭೀಷಣ ಮತ್ತು ರಾವಣ ಇಬ್ಬರಿಗೂ ನ್ಯಾಯ ಸಿಕ್ಕಿದಂತಾಗುತ್ತದೆ' ಎಂದನಂತೆ.

ಆದರೆ ರಾವಣನಿಗೆ ತಾನು ಮಾಡುತ್ತಿರುವುದು ತಪ್ಪೆಂದು ಗೊತ್ತಿದ್ದರೂ, ತಪ್ಪಾಯಿತು ಎಂದು ಒಪ್ಪಿಕೊಳ್ಳಲೂ ಇಲ್ಲ. ತಪ್ಪನ್ನು ತಿದ್ದಕೊಳ್ಳಲೂ ಇಲ್ಲ. ಕೊನೆಗೆ ಯುದ್ಧದಲ್ಲಿ ಸೋಲನ್ನೂ ಸಾವನ್ನೂ ಅಪ್ಪಿದ.

ತಪ್ಪುಗಳು ಆರೋಗ್ಯಕ್ಕೆ ಮಾರಕ

ಮನೋವಿಜ್ಞಾನಿಗಳು "ನಮ್ಮ ತಪ್ಪುಗಳನ್ನು ದೇವರು ಬೇಕಾದರೂ ಮನ್ನಿಸಬಹುದು. ಆದರೆ ನಮ್ಮ ನರಮಂಡಲ ಮಾತ್ರ ಕ್ಷಮಿಸುವುದಿಲ್ಲ" ಎಂಬುದಾಗಿ ಹೇಳುತ್ತಾರೆ. ಅಂದರೆ ನಾವು ಪ್ರಜ್ಞಾಪೂರ್ವಕವಾಗಿ ಬಾರಿಬಾರಿ ಮಾಡಿದ ತಪ್ಪು ನಮ್ಮ ಆರೋಗ್ಯವನ್ನೂ ನೆಮ್ಮದಿಯನ್ನೂ ಹಾಳುಮಾಡುತ್ತದೆ. ಆದ್ದರಿಂದ ನಮ್ಮ ಆರೋಗ್ಯವನ್ನು ನೆಮ್ಮದಿಯನ್ನು ಕಾಪಾಡಿಕೊಳ್ಳಬೇಕಾದರೆ ಪ್ರಜ್ಞಾಪೂರ್ವಕವಾಗಿ ತಪ್ಪು ಮಾಡದಿರೋಣ. ತಪ್ಪು ನಡೆದಾಗ ಒಪ್ಪಿಕೊಳ್ಳೋಣ. ಆತ್ಮಸಾಕ್ಷಿಗೆ ಸರಿಯಾಗಿ ನಡೆದುಕೊಳ್ಳೋಣ. ಇತರರ ತಪ್ಪುಗಳನ್ನು ಕ್ಷಮಿಸೋಣ.

ಜಾರಿಬೀಳುವುದು ಸ್ವಾಭಾವಿಕ. ಆದರೆ ಮತ್ತೆ ಮತ್ತೆ ಜಾರಿಬೀಳದಿರುವುದು ವಿವೇಕ. ತಪ್ಪು ಮಾಡುವುದು ಮನುಷ್ಯನ ಗುಣ. ಆದರೆ ತಪ್ಪನ್ನು ಪುನರಾವರ್ತಿಸದೆ ಇರುವುದು ದೈವೀಗುಣ. ಮಾನವತೆಯಿಂದ ದೈವತ್ವಕ್ಕೆ ಏರಬೇಕಾದರೆ ನಮ್ಮಿಂದ ಆದ ತಪ್ಪುಗಳನ್ನು ಒಪ್ಪಿ, ತಿದ್ದಿಕೊಳ್ಳೋಣ. ಆದರೆ ಎಷ್ಟು ಮಾತ್ರಕ್ಕೂ ಅದನ್ನೇ ಅಪ್ಪಿಕೊಳ್ಳದಿರೋಣ.

ಸಾಭಾರ – ಉತ್ಥಾನ

ಖಾದಿ ವಿಚಾರ

ಕರ್ನಾಟಕ ರಾಜ್ಯ ಪ್ರಥಮ ಖಾದಿ ಕಾರ್ಯಕರ್ತರ ಸ್ನೇಹಮಿಲನ

(೫ ಮಾರ್ಚ್ ೨೦೧೭)

ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವಿಶೇಷ ಮಹತ್ವದ ಖಾದಿ ಕ್ಷೇತ್ರದಲ್ಲಿ ಅನೇಕ ಸ್ಥಿತ್ಯಂತರಗಳು ಆಗುತ್ತಲಿವೆ. ಆದರೆ ಗಾಂಧಿಜೀಯವರಿಂದ ಪ್ರಣೀತಗೊಂಡ ಖಾದಿಯ ಮೂಲ ಭಾವನೆಗಳು, ವಿಚಾರಗಳು ಮತ್ತು ಸಿದ್ಧಾಂತಗಳು ಬದಲಾಗಬಾರದು. ಪರಿವರ್ತನೆಯ ಈ ಸಂಕ್ರಾಂತಿ ಕಾಲದಲ್ಲಿ ಖಾದಿ ಕಾರ್ಯಕರ್ತರು ಒಟ್ಟಾಗಿ ಸೇರಿ ಪರಸ್ಪರರಲ್ಲಿ ಬಾಂಧವ್ಯ ಬೆಳೆಸಿಕೊಳ್ಳಬೇಕಾದುದು ಅಗತ್ಯ

ಖಾದಿಯ ಗುರಿ ಸರ್ವೋದಯಸಮಾಜವನ್ನು ರಚನೆಮಾಡುವುದಾದರೆ ಆ ಸಮಾಜ ರಚನೆಗೆ ಖಾದಿ ಒಂದು ಮುಖ್ಯ ಸಾಧನ. ಆದ್ದರಿಂದ ಖಾದಿ ಕಾರ್ಯಕರ್ತರು ಮತ್ತು ಸರ್ವೋದಯ ಕಾರ್ಯಕರ್ತರು ಜೊತೆಗೂಡಿ ಕೆಲಸ ಮಾಡಬೇಕಾದುದು ಈ ಯುಗಧರ್ಮ.

ಮೇಲ್ಕಾಣಿಸಿದ ವಿಚಾರಗಳನ್ನು ಗಮನದಲ್ಲಿರಿಸಿಕೊಂಡು ಮೊದಲ ಹೆಜ್ಜೆಯಾಗಿ ೫/೩/೨೦೧೭ ಭಾನುವಾರದಂದು "ಕರ್ನಾಟಕ ರಾಜ್ಯ ಖಾದಿ ಕಾರ್ಯಕರ್ತರ ಪ್ರಥಮ ಸ್ನೇಹಮಿಲನ" ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್ ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆಯಿತು.

ಸ್ನೇಹ ಮಿಲನದಲ್ಲಿ ಭಾಗಿಯಾಗಬೇಕೆಂದು ಕೋರಿ ೪೫ ಖಾದಿ ಸಂಸ್ಥೆಗಳ ಪದಾಧಿಕಾರಿಗಳಿಗೆ ವಿನಂತಿ ಪತ್ರವನ್ನು ಕಳುಹಿಸಲಾಗಿತ್ತು. ಆದರೆ ಕೇವಲ ೧೮ ಸಂಸ್ಥೆಗಳ ಕಾರ್ಯಕರ್ತರು ಸ್ನೇಹಮಿಲನದಲ್ಲಿ ಭಾಗವಹಿಸಿದರು. ಅವರೆಲ್ಲರು ಸ್ನೇಹಮಿಲನದ ವಿಚಾರವನ್ನು ತಮ್ಮ ಸಂಸ್ಥೆಯಲ್ಲಿಯ ಎಲ್ಲ ಕಾರ್ಯಕರ್ತರಿಗೂ ಮತ್ತು ಕೆಲಸಗಾರರಿಗೂ ತಿಳಿಸುವುದಾಗಿ ಭರವಸೆ ನೀಡಿದರು.

ಸ್ನೇಹಮಿಲನವು ನೇಕಾರ ಮಹಿಳೆಯರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ನಂತರ ಜನಪದ ಸೇವಾ ಟ್ರಸ್ಟಿನ ಕಾರ್ಯದರ್ಶಿಯವರಾದ ಸಂತೋಷ್ ಕೌಲಗಿರವರು ಸ್ನೇಹಮಿಲನಕ್ಕೆ ಆಗಮಿಸಿದ್ದ ಎಲ್ಲ ಖಾದಿಕಾರ್ಯಕರ್ತರನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಸೇರಿದ್ದ ಕಾರ್ಯಕರ್ತರು ತಮ್ಮತಮ್ಮ ಪರಿಚಯ ಹಾಗೂ ಸಂಸ್ಥೆಯ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಟ್ಟರು.

ಸ್ನೇಹಮಿಲನದಲ್ಲಿ ಉಪಸ್ಥಿತರಿದ್ದ ಸುರೇಂದ್ರ ಕೌಲಗಿರವರು ಸ್ನೇಹಮಿಲನದ ಅಗತ್ಯವೇಕೆ ಉಂಟಾಗಿದೆ ಎಂಬುದನ್ನು ಸವಿಸ್ತಾರವಾಗಿ ತಿಳಿಸಿದರು. "ಒಂದು ಉದ್ದೇಶಕ್ಕಾಗಿ ಕೆಲಸ ಮಾಡುವವರಲ್ಲಿ ಬಾಂಧವ್ಯದ ಭಾವನೆ ಇರಬೇಕಾದುದು ಮುಖ್ಯ. ತಮ್ಮ ತಮ್ಮ ಸಂಸ್ಥೆಯ ಚೌಕಟ್ಟಿನಾಚೆಗೂ ಇರುವ ಜನರೊಂದಿಗೆ ಬಾಂಧವ್ಯ ಮತ್ತು ಸ್ನೇಹ ಬೆಳೆಸಿಕೊಂಡರೆ ಮಾಡುವ ಕೆಲಸಕ್ಕೆ ಬಲಬರುತ್ತದೆ. ಅಲ್ಲದೆ ಮುಂದಿನ ತಲೆಮಾರಿನವರು ಖಾದಿ ಕೆಲಸವನ್ನು ಮುನ್ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ. ಕೇವಲ ಸರ್ಕಾರದ ಅನುದಾನದ ಮೇಲೆಯೇ ಜೀವನಪೂರ್ತಿ ಅವಲಂಬಿಸಿದೆ ಅದರಿಂದ ಬಿಡುಗಡೆ ಪಡೆದು ಕೆಲಸಮಾಡುವುದು ಅಗತ್ಯವಾಗಿದೆ" ಎಂದು ಹೇಳಿದರು.

ಹೊಸದುರ್ಗ ಖಾದಿ ಸಂಸ್ಥೆಯ ಕಾರ್ಯದರ್ಶಿಯವರು ತಮ್ಮಲ್ಲಿಯ ಸೋಲಾರ್ ಚರಖದ ಬಗ್ಗೆ ತಿಳಿಸಿದರು. ಅಂಥ ಚರಖದ ಅನುಕೂಲತೆ ಮತ್ತು ಅನಾನುಕೂಲತೆಯ ಬಗ್ಗೆ ಹಾಗೂ ನೂಲುಗಾರರ ಅನುಭವದ ಬಗ್ಗೆ ವಿಸ್ತಾರವಾಗಿ ಚರ್ಚೆ ನಡೆಯಿತು. ನಿರುದ್ಯೋಗವನ್ನುಂಟುಮಾಡದೆ, ಸುಲಭ ಶರೀರಬಲದಿಂದ ಉತ್ತಮ ಮಟ್ಟದ ನೂಲು ಉತ್ಪಾದನೆಯಾಗುವುದಾದರೆ ಸೌರಶಕ್ತಿಯನ್ನು ಬಳಸುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬಹುದೆಂದು ಹೊಳೆನರಸೀಪುರ

ಖಾದಿ ಸಂಸ್ಥೆಯ ಹಿರಿಯ ಖಾದಿಕಾರ್ಯಕರ್ತರಾದ ಶ್ರೀ ಎಂ. ಮಹಾದೇವಪ್ಪನವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಹರಿಹರ ಖಾದಿ ಸಂಸ್ಥೆಯ ಕಾರ್ಯದರ್ಶಿ ಎಂ.ಎಸ್.ರಮೇಶ್‌ರವರು ಗೊಂಡಾಲ್‌ನಲ್ಲಿ ನಡೆಯುತ್ತಿರುವ ಮಗ್ಗಗಳ ಕಾರ್ಯವಿಧಾನದ ಬಗ್ಗೆ ತಿಳಿಸಿದರು.

ಖಾದಿ ಕ್ಷೇತ್ರದಲ್ಲಿಯ ವಿವಿಧ ಸಮಸ್ಯೆಗಳ ಬಗ್ಗೆ ನಡೆದ ಚರ್ಚೆಯಲ್ಲಿ ಹೊಳೆನರಸಿಪುರ ಖಾದಿ ಸಂಸ್ಥೆಯ ಕಾರ್ಯದರ್ಶಿ ಎಚ್. ಪ್ರಭುಸ್ವಾಮಿ, ಧಾರವಾಡ ಖಾದಿ ಸಂಸ್ಥೆಯ ಕಾರ್ಯದರ್ಶಿ ಶ್ರೀ ನರಹರಿ ಕಾಗಿನೆಲೆ, ಜನಪದ ಸೇವಾಟ್ರಸ್ಟಿನ ಕಾರ್ಯದರ್ಶಿ ಸಂತೋಷ್ ಕೌಲಗಿ, ಕರ್ನಾಟಕ ಸರ್ವೋದಯ ಖಾದಿ ಸಂಸ್ಥೆಯ ಕಾರ್ಯದರ್ಶಿ ಅರುಣ್‌ಕುಮಾರ್ ಮತ್ತು ಇನ್ನಿತರರು ಉತ್ಸಾಹದಿಂದ ಭಾಗವಹಿಸಿದರು.

ಮಧ್ಯಾಹ್ನದ ಭೋಜನ ನಂತರ ಸೇರಿದ ಎರಡನೇ ಸಭೆಯಲ್ಲಿ ಈ ಕೆಳಗೆ ಕಾಣಿಸಿದ ವಿಷಯಗಳು ಚರ್ಚೆಯಾಗಿ ತೀರ್ಮಾನಗೊಂಡವು.

೧. ಸ್ನೇಹಮಿಲನದಲ್ಲಿ ಭಾಗವಹಿಸಿದವರೆಲ್ಲರೂ ಸರ್ವೋದಯ ಮಿತ್ರರಾಗಬೇಕು ಮತ್ತು ತಮ್ಮ ಜಿಲ್ಲಾಹಂತದ ಸರ್ವೋದಯ ಮಿತ್ರ

ಮಂಡಳಿಯನ್ನು ರಚಿಸಬೇಕು, ತನ್ಮೂಲಕ ಖಾದಿ ಕಾರ್ಯದೊಂದಿಗೆ ಸರ್ವೋದಯ ಆಂದೋಲನದ ಕೆಲಸವನ್ನೂ ಮಾಡಬೇಕು.

೨. ಜನಪದ ಸೇವಾ ಟ್ರಸ್ಟ್ ಪ್ರಕಟಿಸುತ್ತಿರುವ "ಜನಪದ ವಿಚಾರ" ತಿಂಗಳ ವೈಚಾರಿಕ ಮಾಸ ಪತ್ರಿಕೆಗೆ ಚಂದಾದಾರರಾಗಬೇಕು ಮತ್ತು ಪತ್ರಿಕೆಯಲ್ಲಿ ಪ್ರಕಟಣೆಗಾಗಿ ತಮ್ಮ ಖಾದಿ ಸಂಸ್ಥೆಗಳ ಕಾರ್ಯವರದಿ, ನೇಕಾರರ ಮತ್ತು ನೂಲುಗಾರರ ವಿಶೇಷ ಸಾಧನೆಗಳ ವರದಿ ಇತ್ಯಾದಿಗಳನ್ನು ಕಳುಹಿಸಬೇಕು.

೩. ಮುಂದಿನ ಸ್ನೇಹಮಿಲನವನ್ನು ಚಿತ್ರದುರ್ಗ ಅಥವಾ ಧಾರವಾಡದಲ್ಲಿ ನಡೆಸಲು ತೀರ್ಮಾನಿಸಲಾಯಿತು.

೪. ಖಾದಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರಿಗೆ ಮುಖ್ಯವಾಗಿ ಎರಡನೇಯ ಸಾಲಿನಲ್ಲಿರುವ ಕಾರ್ಯಕರ್ತರಿಗೆ ಖಾದಿ ಮತ್ತು ಸರ್ವೋದಯದ ವಿಚಾರಗಳನ್ನು ಕುರಿತು ತಿಳಿಸಲು ಎರಡು ದಿನದ ಕಾರ್ಯಾಗಾರವನ್ನು ನಡೆಸಬೇಕು ಮತ್ತು ಆ ಕಾರ್ಯಾಗಾರಕ್ಕೆ ರಾಜ್ಯದ ಪ್ರತಿಯೊಂದು ಖಾದಿ ಸಂಸ್ಥೆ ಇಬ್ಬರು ಕಾರ್ಯಕರ್ತನ್ನಾದರೂ ಕಡ್ಡಾಯವಾಗಿ ಕಳುಹಿಸಿಕೊಡಬೇಕು.

೫. ಮೊದಲ ಅಧ್ಯಯನ ಶಿಬಿರವನ್ನು ಬರುವ ಜೂನ್ ತಿಂಗಳಲ್ಲಿ ಜನಪದ ಸೇವಾ ಟ್ರಸ್ಟ್‌ನಲ್ಲಿ ಆಯೋಜಿಸಬೇಕೆಂದು ತೀರ್ಮಾನಿಸಲಾಯಿತು.

೬. ಎರಡನೇ ಸ್ನೇಹ ಮಿಲನದಲ್ಲಿ ಕಾರ್ಯಕರ್ತರು ತಮ್ಮ ಕುಟುಂಬ ಸಮೇತರಾಗಿ ದೊಡ್ಡ ಸಂಖ್ಯೆಯಲ್ಲಿ ಬರಬೇಕೆಂದು ಆಗ್ರಹ ಪೂರ್ವಕವಾಗಿ ಸೂಚಿಸಲಾಯಿತು.

ನರಹರಿ ಕಾಗಿನೆಲೆಯವರ ವಂದನಾರ್ಪಣೆಯೊಂದಿಗೆ ಕರ್ನಾಟಕ ರಾಜ್ಯ ಪ್ರಥಮ ಖಾದಿ ಕಾರ್ಯಕರ್ತರ ಸ್ನೇಹಮಿಲನ ಸಂತೋಷದಿಂದ ಮುಕ್ತಾಯ ಗೊಂಡಿತು.

ವರದಿ– ಮೋಹನ್

ಜನಪದ ಸೇವಾ ಟ್ರಸ್ಟ್ ಸಮಾಚಾರ

ಸರ್ಕಾರೇತರ ಸೇವಾ ಸಂಸ್ಥೆಗಳಿಗೆ ಮಾರ್ಗದರ್ಶನ ಮತ್ತು ಪ್ರಶಿಕ್ಷಣ ಕೊಡುವ ಸಂಸ್ಥೆ Nipccid ಇತ್ತೀಚೆಗೆ ೨೫ ಸಂಸ್ಥೆಗಳ ಪದಾಧಿಕಾರಿಗಳನ್ನೂ ಜನಪದ ಸೇವಾ ಟ್ರಸ್ಟಿಗೆ ಶೈಕ್ಷಣಿಕ ಭೇಟಿಗಾಗಿ ಕರೆದುಕೊಂಡು ಬಂದಿತು. ಅವರಲ್ಲಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಸಂಸ್ಥೆಗಳ ಪದಾಧಿಕಾರಿಗಳು ಇದ್ದರು. ಒಂದು ದಿನ ಪೂರ್ತಿ ಅವರು ಹೊಸ ಜೀವನ ದಾರಿಗೆ ಮತ್ತು ಮೇಲುಕೋಟೆಯಲ್ಲಿಯ ಮುಖ್ಯ ಕೇಂದ್ರಕ್ಕೆ ಭೇಟಿಕೊಟ್ಟರು. ವಿಚಾರ ವಿನಿಮಯ ಮಾಡಿಕೊಂಡರು. ಕಳೆದ ಆರು ದಶಕಗಳಿಂದ ಕೇವಲ ಜನ ಸಹಾಯ ಮತ್ತು ಸ್ವಪ್ರಯತ್ನದಿಂದ ನಡೆಯುತ್ತಿರುವ ಟ್ರಸ್ಟಿನ ಕೆಲಸ ಕಾರ್ಯಗಳನ್ನು ತಿಳಿದು ಮತ್ತು ಸಿದ್ಧಾಂತವನ್ನು ತಿಳಿದು ಸಂತೋಷ ಪಟ್ಟರು. ಟ್ರಸ್ಟಿನ ತಮ್ಮ ಈ ಭೇಟಿಯಿಂದ ತಮ್ಮ ಸೇವಾ ದೃಷ್ಟಿಕೋನಕ್ಕೆ ಹೊಸ ಆಯಾಮ ಬಂದಿತ್ತೆಂದು ಹೇಳಿದರು. ಈ ಗುಂಪಿನ ನೇತೃತ್ವವನ್ನು ಓಠಿಛಿಛಿಜ ನಿರ್ದೇಶಕರಾದ ಶ್ರೀ ಅರವಿಂದ್‌ರವರು ವಹಿಸಿದ್ದರು.

***

ಜನಪದ ಸೇವಾ ಟ್ರಸ್ಟಿನ ಹಳೆಯ ಅಭಿಮಾನಿಗಳಾದ ಗುರು ಶ್ಯಾಮ್ ಪುರ ಮತ್ತು ಕಮಲಮ್ಮಗುರು ಇವರ ಸುಪುತ್ರರಾದ ದೇವರಾಜುರವರು ಟ್ರಸ್ಟಿಗೆ ಭೇಟಿಕೊಟ್ಟರು. ತಮ್ಮ ತಂದೆ-ತಾಯಿಗಳು ಭೇಟಿ ಮಾಡುತ್ತಿದ್ದ ಮತ್ತು ಧನ ಸಹಾಯ ಮಾಡುತ್ತಿದ್ದ ಸಂಸ್ಥೆಗೆ ಅನೇಕ ವರ್ಷಗಳ ನಂತರ ಟ್ರಸ್ಟಿಗೆ ಭೇಟಿಕೊಡುತ್ತಿರುವುದಕ್ಕಾಗಿ ತನಗೆ ಅತೀವ ಸಂತೋಷವಾಗಿದೆ ಎಂದು ಶ್ರೀ ದೇವರಾಜುರವರು ಹೇಳಿದರು. ಟ್ರಸ್ಟಿನ ಸದಸ್ಯರಿಗೂ ಅವರ ಭೇಟಿ ಹಳೆಯ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡಿತು, ಸಂತೋಷವಾಯಿತು.

***

ಕರ್ನಾಟಕದಲ್ಲಿರುವ ಖಾದಿ ಸಂಸ್ಥೆಗಳಲ್ಲಿಯ ಕಾರ್ಯಕರ್ತರಲ್ಲಿ ಬಾಂಧವ್ಯವನ್ನುಂಟುಮಾಡುವ ದೃಷ್ಟಿಯಿಂದ ಮತ್ತು ಖಾದಿ ಕೆಲಸಕ್ಕೆ ಬಲ ತರುವ ದೃಷ್ಟಿಯಿಂದ, ಖಾದಿ ಸಂಸ್ಥೆಗಳ ಕಾರ್ಯಕರ್ತರ ಒಂದು ದಿನದ ಸ್ನೇಹಮಿಲನವನ್ನು ಹೊಸ ಜೀವನ ದಾರಿ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು. ಪ್ರತಿವರ್ಷವು ಸ್ನೇಹ ಮಿಲನ ನಡೆಯಬೇಕು ಮತ್ತು ಖಾದಿಕಾರ್ಯಕರ್ತರಿಗೆ ಸೈದ್ಧಾಂತಿಕ ವಿಚಾರಗಳನ್ನು ಮನದಟ್ಟು ಮಾಡಿಕೊಡುವ ದೃಷ್ಟಿಯಿಂದ ಶಿಬಿರ ನಡೆಸಬೇಕೆಂದು ತೀರ್ಮಾನವಾಯಿತು.

ನಾಲ್ಕು ನಿಟ್ಟಿನಿಂದ...

ವಿರೋಧ ಪಕ್ಷದಲ್ಲಿ ಇರುವವರು ಮೊದಲು ತಮ್ಮ ಆಸನದಲ್ಲಿ ಗಟ್ಟಿಯಾಗಿ ಕುಳಿತುಕೊಳ್ಳಲು ಕಲಿಯಬೇಕು. ವಿರೋಧ ಪಕ್ಷಗಳು ಎಂದರೇ ಸರ್ಕಾರವನ್ನು ವಿರೋಧ ಮಾಡುವುದು ಎಂದು ಅರ್ಥವೇ ಹೊರತು ಸರ್ಕಾರಕ್ಕೆ ಅಡ್ಡಿ ಮಾಡುವುದು ಎಂದು ಅಲ್ಲ.

*** ಪದ್ಮರಾಜ್ ದಂಡಾವತಿ**

ತಾವು ನಿದನರಾದ ಮೇಲೆ ಅಂತಿಮ ವಿಧಿವಿಧಾನಗಳನ್ನು ಹೇಗೆ ಮಾಡಬೇಕೆಂದು ಬರೆದಿಟ್ಟಿದ್ದರು. ಶವದ ಮೇಲೆ ಹೂವುಗಳನ್ನಿಡುವುದನ್ನು ಅವರು ನಿರಾಕರಿಸಿದ್ದರು. ಹೂವು ಜೀವಂತಿಕೆಗೆ ನಿದರ್ಶನ! ಜೀವ ಕಳೆದುಕೊಂಡಿರುವ ದೇಹದ ಮೇಲೆ ಅದನ್ನು ಇರಿಸುವುದು ಅನೌಚಿತ್ಯ.

*** ನಾರಾಯಣ್ ದತ್**

ದೇಶದ ಆರ್ಥಿಕ ವ್ಯವಹಾರದ ಕೇಂದ್ರವಾದ ಮುಂಬೈ ನಗರದಲ್ಲಿ ೪೬ ಸಾವಿರ ಕೋಟ್ಯಾಧೀಶರರು ಮತ್ತು ೨೮ ಮಹಾ ಕೋಟ್ಯಾಧೀಶ್ವರರು ಇದ್ದಾರೆ. ಒಟ್ಟು ಎಂಡು ಸಾವಿರದ ಇಪ್ಪತ್ತು ಬಿಲಿಯನ್ ಪೌಂಡ್ ಐಶ್ವರ್ಯವಿರುವ ಮುಂಬೈ, ಭಾರತದ ಅತ್ಯಂತ ಶ್ರೀಮಂತ ನಗರವಾಗಿದೆ. ಅದಾದ ನಂತರ ದೆಹಲಿಯ ಸ್ಥಾನವಿದೆ. ಬೆಂಗಳೂರು ಮೂರನೇ ಸ್ಥಾನವಿದೆ. ಅಲ್ಲಿ ೨೩,೦೦೦ ಕೋಟ್ಯಾಧೀಶ್ವರರು ಮತ್ತು ೧೮,೦೦೦ ಮಹಾಕೋಟ್ಯಾಧೀಶ್ವರರು ಇದ್ದಾರೆ.

***ಹಿಂದೂ**

ನೀರಿನ ಬರಗಾಲ ಶ್ರೀಲಂಕೆಯನ್ನು ಆವರಿಸಿದೆ, ಎರಡು ಕೋಟಿ ಜನಸಂಖ್ಯೆಯ ಆ ದ್ವೀಪದಲ್ಲಿ ದಶಲಕ್ಷ ಜನರು ನೀರ ಬರದಿಂದ ಪೀಡಿತ ರಾಗಿದ್ದಾರೆ. ಕಳೆದ ನಲವತ್ತು ವರ್ಷಗಳಲ್ಲಿ ಇದು ಅತ್ಯಂತ ಭೀಕರವಾದ ಬರಗಾಲವಾಗಿದೆ.

***ಡೌನ್‌ಟು ಅರ್ಥ್**

ಬಲಾಢ್ಯ ನಾಯಕನನ್ನು ಹೊದಿರುವ ರಾಷ್ಟ್ರೀಯ ಪಕ್ಷದ ಪರವಾಗಿ ದೇಶದ ಮನಸ್ಸು ತಿರುಗುತ್ತಿದೆ. ವಿಭಜನಾಕಾರಿ ಶಕ್ತಿಗಳನ್ನು ಉತ್ತೇಜಿಸುವ ಪಕ್ಷಗಳ ವಿರುದ್ಧ ಭಾವನೆ ಹರಳುಗುಟ್ಟುತ್ತಿವೆ. ಈ ಭಾವನೆಯನ್ನು ಮೋದಿ ತಮ್ಮ ಪರ ಬಳಸಿಕೊಳ್ಳುತ್ತಿದ್ದಾರೆ.

***ಎ. ಸೂರ್ಯಪ್ರಕಾಶ್**

ಮುಸ್ಸಂಜೆಯ ಬೆಳಕಿನಲ್ಲಿ.....೫

– ಸುರೇಂದ್ರ ಕೌಲಗಿ

ಒಂದೇ ದಿನ ಎರಡು–ಮೂರು ಸಂತಸದ ಘಟನೆಗಳು ಒಟ್ಟಿಗೆ ನಡೆದು ಮನಸ್ಸಿಗೆ ಹರ್ಷವನ್ನುಂಟುಮಾಡುತ್ತವೆ. ಜೊತೆಯಲ್ಲಿ ಕಳೆದು ಹೋದ ಘಟನೆಗಳ ಸಿಹಿ–ಕಹಿ ಸ್ಮರಣೆಯೂ ಆಗುವಂತೆ ಮಾಡುತ್ತವೆ. ಅಂಥ ಎರಡು ವಿಶೇಷ ಸಂಗತಿಗಳು ಇತ್ತೀಚೆಗೆ ನಡೆದವು. ಒಂದನೇಯ ಸಂಗತಿಯೇನೆಂದರೆ ೨೪ ವರ್ಷದ ನನ್ನ ಮೊಮ್ಮಗ ವಾಹನ ಚಾಲಕನಾಗಿ ನನ್ನನ್ನು ಪಶ್ಚಿಮವಾಹಿನಿಯಲ್ಲಿ ನಡೆದ ಸರ್ವೋದಯ ಮೇಳಕ್ಕೆ ಕರೆದುಕೊಂಡು ಹೋದುದು. ಮುಂದೊಂದು ದಿನ ಮೊಮ್ಮಗನೇ ಚಾಲಕನಾಗಿ ನನ್ನ ಪಕ್ಕ ಕುಳಿತುಕೊಂಡು ಪರ ಊರಿಗೆ ಕರೆದುಕೊಂಡು ಹೋಗುತ್ತಾನೆ ಎಂದು ನೆನದಿರಲಿಲ್ಲ. ಮೊಮ್ಮಗ ವಾಹನ ನಡೆಸುತ್ತಿದ್ದರೆ ೬೦ ವರ್ಷಗಳ ಹಿಂದೆ ಟ್ರಸ್ಟಿನ ವಾಹನವಾಗಿದ್ದ ಡಿಸೈಲ್ ಜೀಪನ್ನು ನಾನು ಓಡಿಸುತ್ತಿದುದು ನೆನಪಾಯಿತು. ಆಗ ನನಗೆ ೨೯ ವರ್ಷ. ವಾಹನ ಚಾಲನೆಯ ಅನುಭವ ಮತ್ತು ವಾಹನವನ್ನು ಸುಸ್ಥಿತಿ ಇಡುವ ಬಗ್ಗೆ ಹೆಚ್ಚಿನ ತಿಳುವಳಿಕೆ ಸ್ವಲ್ಪವೂ ಇರದೆ ಇದ್ದುದರಿಂದ ಅನುಭವಿಸಿದ ಕಷ್ಟಗಳು ನಾನಾ ವಿಧ. ಆ ಕಷ್ಟಗಳನ್ನು ನೆನೆಯುತ್ತ ಹೋದರೆ ಅದೊಂದು ದೊಡ್ಡ ಪುರಾಣವೇ ಆಗುತ್ತದೆ. ಅಂಥ ವಿಶೇಷ ಅನುಭವ ಪೂರ್ಣಚಂದ್ರ ತೇಜಸ್ವಿಯವರಂಥ ಸಾಹಿತಿಯ ಕೈಗೆ ಸಿಕ್ಕಿದ್ದರೆ ಅವರು ಒಂದು ರೋಚಕ ಕಥೆಯನ್ನಾಗಿ ಪರಿವರ್ತಿಸುತ್ತಿದ್ದರೇನೋ, ಅಂತೂ ನನ್ನ ಮತ್ತು ಜೀಪಿನ ಅನುಭವವವನ್ನು ಕೇಳಿ ಮಕ್ಕಳು ಮತ್ತು ಮೊಮ್ಮಕ್ಕಳು ನಕ್ಕಿದ್ದಾರೆ ಮತ್ತು ಆಡಿಕೊಂಡಿದ್ದಾರೆ. ನಾನು ವಾಹನ ಓಡಿಸುತ್ತಿದ್ದ ಕಾಲದಲ್ಲಿ ಸುಲಭವಾಗಿ ಇಂಧನ ದೊರೆಯುತ್ತಿರಲಿಲ್ಲ ಹಾಗೂ ಮೆಕಾನಿಕ್‌ಗಳು ಸುಲಭವಾಗಿ ಲಭ್ಯವಿರುತ್ತಿರಲಿಲ್ಲ. ರಸ್ತೆಗಳು ಕೆಟ್ಟದಾಗಿದ್ದವು, ಆದ್ದರಿಂದ ಸಮಸ್ಯೆಗಳ ಮೇಲೆ ಸಮಸ್ಯೆ ಬರುತ್ತಿದ್ದವು.

ವಾಹನದ ರುಚಿಕಂಡು ಮತ್ತು ಅದರ ದಾಸನಾದ ಮೇಲೆ ಆ ವಾಹನ ಎಷ್ಟೇ ತೊಂದರೆ ಕೊಟ್ಟರೂ ಅದನ್ನು ಮತ್ತೆಮತ್ತೆ ದುಬಾರಿ ಖರ್ಚಿನೊಂದಿಗೆ ಸರಿಪಡಿಸಿ ಉಪಯೋಗಿಸುತ್ತಾ ಹೋಗಲಾಗುತ್ತಿತ್ತು. ಇನ್ನೊಂದು ವಿಶೇಷವೆನೆಂದರೆ ಜೀಪನ್ನು ಸುಮಾರು ಏಳೆಂಟು ವರ್ಷಗಳ ಕಾಲ ಓಡಿಸಿದೆ. ರಾಜ್ಯದ ದೂರದ ಊರಿಗೂ ಹೋಗಿ ಬಂದೆ, ಆದರೆ ನನ್ನ ಬಳಿ ಡ್ರೈವಿಂಗ್ ಲೈಸೆನ್ಸೇ ಇರಲಿಲ್ಲ! ಆದರೆ ಎಂದೂ ಆ ಬಗ್ಗೆ ಯಾವುದೇ ತೊಂದರೆ ಬರಲೇ ಇಲ್ಲ. ಈ ಮಾತನ್ನು ಕೇಳಿ ಮೊಮ್ಮಕ್ಕಳಿಗೆ ಆಶ್ಚರ್ಯವಾಯಿತು. ಅರವತ್ತರಿಂದ ಎಪ್ಪತ್ತು

ಕಿ.ಲೋ.ಮೀಟರ್‌ಗಿಂತ ವೇಗವಾಗಿ ಎಂದೂ ವಾಹನ ಓಡಿಸಿರಲಿಲ್ಲ. ಆದರೆ ಆ ದಿನ ನನ್ನ ಮೊಮ್ಮಗ ವೇಗವಾಗಿ ಬಹುಧೈರ್ಯದಿಂದ ವೇಗವಾಗಿ ವಾಹನ ಓಡಿಸುತ್ತಿದ್ದ, ಅವನಿಗೆ ನಿಧಾನವಾಗಿ ವಾಹನ ಓಡಿಸಲು ಪದೇಪದೇ ಎಚ್ಚರಿಸುತ್ತಿದ್ದೆ. ತಿರುವುಗಳಲ್ಲಿ ಮತ್ತು ಹಳ್ಳಿಗಳು ಹತ್ತಿರ ಬಂದರೆ ನಿದಾನವಾಗಿ ಹೋಡಿಸಲು ಪದೇಪದೇ ಎಚ್ಚರಿಸುತ್ತಿದ್ದೆ. ಬಂದಾದ ನಂತರ "ವಾಹನವನ್ನು ನಾನು ಓಡಿಸಿದ್ದರೂ ಸ್ಟೇರಿಂಗ್ ಪರೋಕ್ಷವಾಗಿ ತಾತನ ಕೈಯಲ್ಲೆ ಇತ್ತು"! ಎಂದು ಎಲ್ಲರಿಗೂ ಹೇಳಿ ನಗುತ್ತಾ ಇದ್ದ.

ಇದರೊಂದಿಗೆ ಇನ್ನೊಂದು ಸಂತಸದ ಸಂಗತಿಯೇನೆಂದರೇ ಅವನು ಮೊದಲ ಬಾರಿಗೆ ಸರ್ವೋದಯ ಮೇಳಕ್ಕೆ ಬಂದುದು. ಆತ ಅಲ್ಲಿ ನಡೆದ ಉಪನ್ಯಾಸಗಳೆಲ್ಲವನ್ನು ಕೇಳಿದ. ಪ್ರಾರ್ಥನಾ ಸಭೆಯಲ್ಲಿ "ಗಾಂಧೀ ವಿಚಾರಗಳನ್ನು ಓದಿದ" ಸಭಾ ಭಯ ಇದ್ದುದರಿಂದ ಅಷ್ಟೊಂದು ಸಮಂಜಸವಾಗಿ ಓದಲಾಗಲಿಲ್ಲ. ಆದರೆ ಅವನ ಈ ಪ್ರಕಾರದ ಭಾಗವಹಿಸುವಿಕೆ ಅವನಲ್ಲಿ ಹೊಸ ಅನುಭವ ತಂದುಕೊಟ್ಟಿತು. ಮುಂದಿನ ವರ್ಷಗಳಲ್ಲಿಯೂ ಸಹ ಮೇಳಕ್ಕೆ ಬರುವ ಆಶೆಯನ್ನು ವ್ಯಕ್ತ ಪಡಿಸಿದ. ಹೀಗೆ ನನ್ನ ಮೊಮ್ಮಗನೊಬ್ಬನನ್ನು ಸರ್ವೋದಯ ವಿಚಾರಕ್ಕೆ ಪರಿಚಯ ಮಾಡಿಕೊಟ್ಟಿದ್ದಕ್ಕೆ ಸಂತೋಷವಾಯಿತು. ಈಗಾಗಲೇ ನನ್ನ ಹಿರಿಯ ಮೊಮ್ಮಗ ಸುಮನಸ್. ಗಾಂಧೀ ವಿಚಾರ, ಖಾದಿ ವಿಚಾರಗಳಿಂದ ಪ್ರೇರಿತನಾಗಿ ಇಂಗ್ಲೆಂಡ್ ನಲ್ಲಿ ವಿಶೇಷ ಅಧ್ಯಯನ ಮಾಡುತ್ತ ಪಿ.ಎಚ್.ಡಿ ಪದವಿಗಾಗಿ ಪ್ರಯತ್ನಿಸುತ್ತಿದ್ದಾನೆ. ಈಗ ಎರಡನೇಯ ಮೊಮ್ಮಗ ಸುಪ್ರಜ್ ಹೋಮಿಯೋಪತಿ ವೈದ್ಯಕೀಯ ಶಾಸ್ತ್ರ ಓದುತ್ತ ಖಾದಿಧಾರಿಯಾಗಿ ಖಾದಿ ಉತ್ಪಾದನೆಯ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದಾನೆ. ಮೊಮ್ಮಗಳು ಸುಹಾಸಿನಿ ತನ್ನ ಭರತನಾಟ್ಯ ಕಲೆಯಿಂದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗೆಜ್ಜೆಯಹೆಜ್ಜೆ ಇಟ್ಟಿದ್ದಾಳೆ. ಈ ರೀತಿ ಮೂರನೇ ತಲೆಮಾರಿನ ಮೊಮ್ಮಕ್ಕಳು ಸರ್ವೋದಯ ಚಿಂತನಾಧಾರಿತ ಕೆಲಸದಲ್ಲಿ ತೊಡಗಿರುವುದನ್ನು ನೋಡಿ ಸಮಾಧಾನವೆನಿಸುತ್ತದೆ. ಮುಸ್ಸಂಜೆಯ ಮಂದ ಬೆಳಕು ನನ್ನ ಮಟ್ಟಿಗಾದರೂ ಹೆಚ್ಚು ಪ್ರಕಾಶಮಾನವಾಗಿ ಕಾಣುತ್ತದೆ.

ಎರಡನೇಯ ಸಂತಸದ ಸಂಗತಿಯೇನೆಂದರೇ ಮಂಡ್ಯದಲ್ಲಿ ನಡೆದ ಖಾದಿ ಪ್ರದರ್ಶನದ ಮುಕ್ತಾಯ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲು ಅವಕಾಶ ಸಿಕ್ಕಿದ್ದು. ಜನಪದ ಸೇವಾ ಟ್ರಸ್ಟ್‌ನಲ್ಲಿ ಖಾದಿ ಕೆಲಸವನ್ನು ೧೯೬೭ ರಿಂದಲೇ ಪ್ರಾರಂಭಿಸಲಾಯಿತು. ಅ-ಸರ್ಕಾರಿ ಖಾದಿಯಾಗಿ ಬೆಳೆಯಿತು. ಸಣ್ಣ ಪ್ರಮಾಣದ ಉತ್ಪಾದನೆ ಮತ್ತು ಮಾರಾಟದಿಂದ ಪ್ರಾರಂಭವಾದ ಖಾದಿ ಕೆಲಸ, ಈಗ ವಿಶೇಷವಾಗಿ ಬೆಳೆದಿದೆ. ಆ ಕೆಲಸಕ್ಕೆ ಹೊಸ ಆಯಾಮಗಳು ಬಂದು ಸೇರಿವೆ. ಬಟ್ಟೆಯ ಗುಣಮಟ್ಟವನ್ನು ಖಾದಿ ಪ್ರಿಯರು ಮೆಚ್ಚಿಕೊಂಡಿದ್ದಾರೆ.

ಪ್ರೌಢ ವಯಸ್ಸಿನ ಹುಡುಗ-ಹುಡುಗಿಯರು ಹಾಗೂ ಕೆಲ ವಿದ್ಯಾರ್ಥಿಗಳು ನೇಯ್ಗೆ ಕೆಲಸಕ್ಕೆ ಬರುವಂತಾಗಿದೆ. ಪೆಟ್ಟಿಗೆ ಚರಖದ ಮೇಲೆ ಸ್ವಾವಲಂಬನೆಗಾಗಿ ನೂಲು ತೆಗೆಯುವುದನ್ನು ಕಲಿಯಲು ಉತ್ಸಾಹದಿಂದ ವಿದ್ಯಾವಂತ ಯುವಕರು ಬರುತ್ತಿದ್ದಾರೆ. ಈ ಅನುಭವದ ಹಿನ್ನಲೆಯಲ್ಲಿ ಖಾದಿ ಸಮಾರಂಭದಲ್ಲಿ ಭಾಗಿಯಾಗಲು ಅವಕಾಶ ದೊರೆತಿದ್ದಕ್ಕಾಗಿ ಸಂತೋಷವಾಯಿತು. ಸುಮಾರು ೬೦ ಮಳಿಗೆಗಳು ಪ್ರದರ್ಶನದಲ್ಲಿದ್ದು ಒಂದು ಕೋಟಿ ಎಪ್ಪತ್ತೈದು ಲಕ್ಷದಷ್ಟು ಖಾದಿ ಗ್ರಾಮೋದ್ಯೋಗ ವಸ್ತುಗಳ ವ್ಯಾಪಾರವಾಗಿತ್ತು. ಖಾದಿ ಬಟ್ಟೆಯ ಬಗ್ಗೆ ಜನರಲ್ಲಿ ಹೆಚ್ಚು ಆಸಕ್ತಿ ಮೂಡುತ್ತಿದೆ. ಇದರ ಲಾಭ ಪಡೆಯಲು ಕೆಲವು ಸಂಸ್ಥೆಗಳು ಕಲಬೆರೆಕೆ ಖಾದಿಯನ್ನು ಉತ್ಪಾದಿಸಿ ಖಾದಿಯ ಮೂಲ ವಿಚಾರಕ್ಕೆ ಅನ್ಯಾಯ ಮಾಡುತ್ತಿವೆ. ಈ ಸಮಸ್ಯೆಗೆ "ಹೊಸ ಖಾದಿ ಪ್ರಚಾರಕ"ರಾದ ಪ್ರಧಾನಿ ನರೇಂದ್ರ ಮೋದಿಯವರು ನಕಲಿ ಖಾದಿ ಸಮಸ್ಯೆಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಆಶಿಸುತ್ತೇನೆ.

ಖಾದಿ ಪ್ರದರ್ಶನದ ಮುಕ್ತಾಯ ಸಮಾರಂಭದ ನಂತರ ಇನ್ನೊಂದು ಸಂತಸ ಕೂಡಿ ಬಂದಿತು. ಜನಪದ ವಿಚಾರದ ಮುದ್ರಕರಾದ ಶ್ರೀ ಸಿ.ಬಸವರಾಜು ದಂಪತಿಗಳು ನನ್ನ ಭೇಟಿಗಾಗಿ ಕಾದುಕುಳಿತು ಸಮಾರಂಭದ ನಂತರ ತಮ್ಮ ಮನೆಗೆ ಪ್ರೀತ್ಯಾದರ ಆಗ್ರಹದ ಮೂಲಕ ಬರಲು ಒಪ್ಪಿಸಿದರು. ಅದರಂತೆ ಅವರ ಮನೆಗೆ ಹೋದೆ, ಅವರು ತಮ್ಮ ಮನೆಯಲ್ಲಿಯೇ ಅತ್ಯಾಧುನಿಕ ಮುದ್ರಣಯಂತ್ರಗಳನ್ನು ಇಟ್ಟುಕೊಂಡು ಪತ್ರಿಕೆಯ ಪ್ರಕಟಣೆ ಮತ್ತು ಬೇರೆಬೇರೆ ಪ್ರಕಾಶಕರ ಪುಸ್ತಕಗಳ ಮುದ್ರಣ ಇನ್ನೂ ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ. ಅವರಲ್ಲಿಯ ಆಧುನಿಕ ಮುದ್ರಣಾಲಯಗಳನ್ನು ನೋಡುತ್ತಿದ್ದಾಗ ೧೯೬೦ರ ದಶಕಗಳಲ್ಲಿ ಜನಪದ ಸೇವಾ ಟ್ರಸ್ಟಿನಲ್ಲಿ ನಡೆಸಲಾಗುತ್ತಿದ್ದ ಜನಪದ ಮುದ್ರಣಾಲಯದ ನೆನಪುಗಳ ಸುರಳಿ ಬಿಚ್ಚಿತು. ಕೈಯಿಂದ ಅಕ್ಷರ ಜೋಡಣೆಯಾಗಿ ಚಿಕ್ಕ ಥ್ರೇಡಲ್ ಮತ್ತು ಒಂದು ದೊಡ್ಡ ಪ್ರಮಾಣದ ಸಿಲಿಂಡರ್ ಯಂತ್ರಗಳಲ್ಲಿ ಮುದ್ರಣದ ಕೆಲಸ ನಡೆಯುತ್ತಿತು. ಕೈಮೈಯೆಲ್ಲ ಮಸಿಯಾಗುತ್ತಿತ್ತು. ಅಕ್ಷರಗಳನ್ನು ಬೆಂಗಳೂರಿನಿಂದ ತರಬೇಕಾಗುತ್ತಿತ್ತು. ಇವತ್ತಿನ ಆಧುನಿಕ ಮುದ್ರಣ ಯಂತ್ರಗಳನ್ನು ನೋಡಿದರೆ ಜನಪದ ಮುದ್ರಣಾಲಯ ನೂರು ವರ್ಷಗಳಷ್ಟು ಹಿಂದಿನದು ಆಗಿತ್ತೆಂದು ಅನಿಸುತ್ತದೆ. ಆದರೆ ಸಮಾಧಾನದ ಸಂಗತಿಯೇನೆಂದರೆ ಜನಪದ ಮುದ್ರಣಾಲಯಕ್ಕೆ ಒಂದು ಸಾಮಾಜಿಕಹಿತದ ಉದ್ದೇಶವಿತ್ತು. ತೊಂದರೆಗೊಳಗಾದ ವಯಸ್ಕ ಮಹಿಳಯರಿಗೆ ಮುದ್ರಣ ಕಲೆಯಲ್ಲಿ ಪ್ರಶಿಕ್ಷಣ ಕೊಟ್ಟು ಅವರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಡುವುದಾಗಿತ್ತು. ಕೆಲವು ಮಹಿಳೆಯರಿಗೆ ಕೆಲಸವೂ ದೊರೆಯಿತು. ಸುಮಾರು ಹತ್ತು ಹದಿನೈದು ಮಹಿಳೆಯರು ಜನಪದ

ಮುದ್ರಣಾಲಯದಿಂದ ಪ್ರಯೋಜನ ಪಡೆದು ತಮ್ಮ ಜೀವನ ರೂಪಿಸಿಕೊಂಡರು ಜನಪದ ಮುದ್ರಣಾಲಯ ಮಾನವಶ್ರಮಾಧಾರಿತವಾಗಿ ನಡೆಯುತ್ತಿದ್ದರಿಂದ ಮಹಿಳೆಯರಿಗೆ ಹೆಚ್ಚು ಉದ್ಯೋಗಾವಕಾಶಗಳು ಇದ್ದವು. ಈಗಿನ ಆಧುನಿಕ ಮುದ್ರಣಾಲಯದಲ್ಲಿ ಮಾನವ ಶಕ್ತಿಗೆ ಅವಕಾಶವೇ ಇಲ್ಲ. ಒಂದೆರಡು ಯಂತ್ರಗಳಿಂದ ಹತ್ತು ಜನರು ಮಾಡಬಹುದಾದ ಕೆಲಸವನ್ನು ಮಾಡಿಸಿಕೊಳ್ಳಬಹುದು. ಅಷ್ಟು ದೊಡ್ಡ ಮುದ್ರಣಾಲಯದಲ್ಲಿ ಕೇವಲ ಇಬ್ಬರು ಅಥವಾ ಮೂವರು ಕೆಲಸ ಮಾಡುತ್ತಿದ್ದರು. ಐವತ್ತರ ದಶಕಗಳಲ್ಲಿಯ ಮುದ್ರಣ ಕೇತ್ರವು ಮಾನವ ಉದ್ಯೋಗಧಾರಿತ ಮತ್ತು ಗೃಹಕೈಗಾರಿಕೆಯ ಸ್ವರೂಪದಲ್ಲಿತ್ತು. ಇಂದಿನ ಮುದ್ರಣಕ್ಷೇತ್ರ ವಿದ್ಯುತ್ತಾಧಾರಿತವಾಗಿರುವುದರಿಂದ ಮಾನವ ಉದ್ಯೋಗಾವಕಾಶಕ್ಕೆ ಅತ್ಯಂತ ಕಡಿಮೆ ಅವಕಾಶ ಉಂಟಾಗಿದೆ. ಅದಕ್ಕಾಗಿ ನನಗೆ ಬಹಳ ಖೇದವೆನಿಸಿತು. ಆದರೆ ಇಪ್ಪತ್ತೊಂದನೆ ಶತಮಾನ ಯಂತ್ರಯುಗವಾಗಿರುವುದರಿಂದ ಮತ್ತು ತಂತ್ರೋಪನಿಷತ್‌ಗಳ ಕಾಲವಾಗಿರುವುದರಿಂದ, ಹೊಸ ಪರಿಸ್ಥಿತಿಯನ್ನು ಒಪ್ಪಬೇಕಾಗಿದೆ. ಬಸವರಾಜುರವರ ಮುದ್ರಣಾಲಯದಲ್ಲಿ ಪ್ರಕಟವಾದ ಪುಸ್ತಕಗಳನ್ನು ನೋಡುತ್ತಿರುವಾಗ ಒಂದು ಪುಸ್ತಕ ನನ್ನ ಗಮನ ಸೆಳೆಯಿತು. ಏಕೆಂದರೆ ಆ ಪುಸ್ತಕದ ಲೇಖಕ ರೋಷನ್ ಭೋಪ್ರ್ ರಾಜಸ್ತಾನದ ಮೂಲದವರು. ಚಿನ್ನ ಬೆಳ್ಳಿ ವ್ಯಾಪಾರಸ್ಥರು ಕರ್ನಾಟಕದಲ್ಲಿ ನೆಲೆಸಿ ಇಲ್ಲಿಯವರಾಗಿದ್ದಾರೆ. ಅಂಥ ಕುಟುಂಬಕ್ಕೆ ಸೇರಿದ ಭೋಪ್ರಾರವರು ಕನ್ನಡ ಮಕ್ಕಳಿಗಾಗಿ "ಕೂಸುಮರಿ" ಎಂಬ ಮಕ್ಕಳ ಕವನಗಳನ್ನು ಬರೆದು ಪ್ರಕಟಿಸಿದ್ದಾರೆ. ಅವರೊಂದಿಗೆ ಮಾತನಾಡುವ ಇಚ್ಛೆ ಆಯಿತು. ಬಸವರಾಜುರವರು ದೂರವಾಣಿಯ ಮೂಲಕ ಅವರೊಂದಿಗೆ ಸಂಪರ್ಕ ಕಲ್ಪಿಸಿಕೊಟ್ಟರು. ಪುಸ್ತಕದ ಬಗ್ಗೆ ನನ್ನ ಮೆಚ್ಚಿಗೆಯನ್ನು ಅವರಿಗೆ ತಿಳಿಸಿದೆ. ಅವರು ತುಂಬ ಸಂತೋಷಪಟ್ಟರು. ಕೂಸುಮರಿಯಲ್ಲಿಯ ಪದ್ಯಗಳನ್ನು ಶ್ರೀಕೃಷ್ಣ ಕನ್ನಡ ಶಿಶೂವಿಹಾರದ ಮಕ್ಕಳಿಗೆ ಹೇಳಿಕೊಡಲು ಪ್ರಯತ್ನಿಸಲಾಗುತ್ತಿದೆ. ಬಸವರಾಜು ಕುಟುಂಬದವರೆಲ್ಲ ಬಹಳ ಪ್ರೀತಿಯಿಂದ ಸತ್ಕರಿಸಿದರು. ಫೋಟೋಗಳನ್ನು ತೆಗೆದುಕೊಂಡರು ಅವರ ಕುಟುಂಬದ ಸದಸ್ಯರೊಂದಿಗೆ ಒಂದು ಗಂಟೆಕಾಲ ಬಹು ಸಂತೋಷದಿಂದ ಕಳೆಯಿತು. ಬಸವರಾಜು ಕುಟುಂಬದ ಸದಸ್ಯರಿಗೆ ನನ್ನ ಹಾರ್ದಿಕ ಶುಭಾಶಯಗಳು.

ರೋಷನ್ ಭೋಪ್ರಾ ರವರ ಕೂಸುಮರಿ ಪುಸ್ತಕದಲ್ಲಿಯ ಒಂದು ಪದ್ಯದ ಈ ಸಾಲುಗಳನ್ನು ನೆನೆಯುತ್ತಾ ನಿರ್ಗಮಿಸಿದೆ.

"ಸ್ವಾರ್ಥಿ ಮನುಜಗಿರುವರಣ್ಣ ನೂರು ದೇವರು"
ಮೂಕ ಪ್ರಾಣಿಗೊಬ್ಬನಿಲ್ಲ ಕಾಯೋದೇವರು!

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ಸಿ. ಕೃಷ್ಣ – ಹಾಸನ

ಶ್ರೀ ಎಚ್. ಎನ್. ರಮೇಶ್ – ಮಂಡ್ಯ

ಶ್ರೀ ಎಂ. ಕೆ. ಸುಬ್ಬರಾವ್ – ಬೆಂಗಳೂರು

ಶ್ರೀ ಎಂ.ಕೆ. ಶಂಕರ್ – ಬೆಂಗಳೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ಎಂ. ಎಸ್. ರಮೇಶ್ – ಹರಿಹರ

ಶ್ರೀ ಎ. ಚಂದ್ರಶೇಖರ್ – ಹೊಸಪೇಟೆ

ಶ್ರೀ ಬಿ.ಎನ್. ರವೀಂದ್ರ – ಚಿತ್ರದುರ್ಗ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ಚಂದಾದಾರರಲ್ಲಿ ವಿನಂತಿ:-

"ಜನಪದ ವಿಚಾರ" ಪ್ರತಿ ತಿಂಗಳು ೩೦ನೇ ತಾರೀಖು ಅಂಚೆಗೆ ಹೋಗುತ್ತದೆ. ತಿಂಗಳ ಒಂದು ವಾರದಲ್ಲಿ ಪತ್ರಿಕೆ ತಲುಪದಿದ್ದರೆ ಕೂಡಲೆ ತಿಳಿಸಿ –೯೧೪೧೭೦೦೮೧೨

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237